WPP No. SK/MNG/WPP/69 D.O.P - 15th of every month from Udupi HPO
ಬೆಲೆ ರೂ.2.50

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.
ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.
ಫೋನ್ : 2531493 (O), 2530851 (R), ಮೊಬೈಲ್ : 94484 37893

# ಶ್ರೀ ಶಾರದಾ


ಮಾಸಪತ್ರಿಕೆ - 15 ಜನವರಿ 2011

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102. ☎ 2520754
ಸಂಪುಟ-11 ಸಂಚಿಕೆ-1 ಪುಟಗಳು-8 Registered Under No.J/UDP/1260/2009-2011 Dated from 01-12-2008 to 30-11-2011.



(ವ್ಯಕ್ತಿ ಪರಿಚಯ) ಶ್ರೀ ಕೆ.ಬಿ.ರಾವ್ ಪುಟ-4
ಶ್ರೀ ಕೃಷ್ಣಾಯನ - ಕೆ. ಆತ್ಮಾರಾಮ ಶಾಸ್ತ್ರಿ, ಬೆಂಗಳೂರು ಪುಟ-2



ದೇಶಭಕ್ತಿ ಸಾಂತೂರು ಸದಾಶಿವ ರಾವ್, ಎಂ.ಎ.ಬಿ.ಎಡ್. ಪುಟ-4
ಯುವಪ್ರತಿಭೆ : ಕುಮಾರಿ ಪ್ರಗತಿ ಭಂಡಿ ಪೆರ್ಡೂರು ಪುಟ-7



## ಕುಂಜಿಬೆಟ್ಟು, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ : ಮಹಾಸಭೆ

ತಾ.26-12-2010ನೇ ಆದಿತ್ಯವಾರ ಸಂಜೆ 4 ಗಂಟೆಗೆ ಸಂಘದ ವಾರ್ಷಿಕ ಮಹಾಸಭೆಯು ಅಧ್ಯಕ್ಷರಾದ ಶ್ರೀ ಸಿ.ಎಸ್.ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಜಯಲಕ್ಷ್ಮೀ ಮುರಳೀಧರ ರಾವ್ ಅವರು ಪ್ರಾರ್ಥನೆಯನ್ನು ಮಾಡಿದ ಬಳಿಕ ಅಧ್ಯಕ್ಷರಾದ ಶ್ರೀ ಸಿ.ಎಸ್. ರಾವ್ ಆಗಮಿಸಿದ ಎಲ್ಲಾ ಸದಸ್ಯರನ್ನು ಸ್ವಾಗತಿಸಿದರು. ವೇದಿಕೆಯಲ್ಲಿ ಕಾರ್ಯದರ್ಶಿ, ಕೋಶಾಧಿಕಾರಿ ಅಲ್ಲದೆ ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು. ಇತ್ತೀಚೆಗೆ ಅಗಲಿದ ನಮ್ಮ ಗೌರವಾಧ್ಯಕ್ಷರಾಗಿದ್ದ ಅಂಬಲ್ಪಾಡಿ ಕೃಷ್ಣರಾಯರಿಗೆ ಸಭೆಯಲ್ಲಿ ಮೌನ ಪ್ರಾರ್ಥನೆ ಮೂಲಕ ಶ್ರದ್ಧಾಂಜಲಿ ಅರ್ಪಿಸಲಾಯಿತು. ಕಾರ್ಯದರ್ಶಿಯವರಾದ ಬಿ.ಕೃಷ್ಣಮೂರ್ತಿ ರಾಯರು 2009-10ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು ಹಾಗೂ 2008-09ನೇ ಸಾಲಿನ ವಾರ್ಷಿಕ ಮಹಾಸಭೆಯ ವರದಿಯನ್ನು ಮಂಡಿಸಿ ಅಂಗೀಕಾರ ಪಡೆದರು. ಹಾಗೆಯೇ ಕಾರ್ಯದರ್ಶಿಯವರು 2009-10 ವರ್ಷದ ಕಾರ್ಯಕ್ರಮಗಳ ವರದಿಯನ್ನು ಸಭೆಗೆ ಓದಿ ಅಂಗೀಕಾರವನ್ನೂ ಪಡೆದರು.

ಕೋಶಾಧಿಕಾರಿಯವರಾದ ಡಾ। ವೈ. ಸುದರ್ಶನರಾಯರು 2009-10ನೇ ವರ್ಷದ ಆಯ-ವ್ಯಯ ಮತ್ತು ಆಸ್ತಿ ಜವಾಬ್ದಾರಿ ತಃಖ್ತೆಗಳ ಪರಿಶೋಧಿತ ವರದಿಯನ್ನು, 2010-11ನೇ ವರ್ಷಕ್ಕೆ ಅಂದಾಜು ಆಯ-ವ್ಯಯ ಪಟ್ಟಿಯನ್ನು ಸಭೆಯಲ್ಲಿ ಓದಿ ಅಂಗೀಕಾರವನ್ನು ಪಡೆದರು.

(3ನೇ ಪುಟಕ್ಕೆ ...)

## ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ಸಾಮೂಹಿಕ ಚಂಡಿಕಾಯಾಗ

ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ದೇವಸ್ಥಾನದಲ್ಲಿ ನಮ್ಮ ಸಮಾಜದವರು ಅಲ್ಲದೆ ಆಸುಪಾಸಿನ ಇತರ ಜನರು ಕೂಡಾ ಶ್ರೀಶಾರದೆಗೆ ಸೇವೆಯನ್ನು ನೀಡುತ್ತಿರುವುದು ಸಂತೋಷದ ವಿಚಾರ. ಕಳೆದ ಕೆಲವು ವರ್ಷಗಳಿಂದ ನಮ್ಮ ಶಾರದಾ ದೇವಸ್ಥಾನದಲ್ಲಿ ಭಕ್ತಜನರ ಅಪೇಕ್ಷೆಯಂತೆ ಪ್ರತೀ ತಿಂಗಳು ಸಾಮೂಹಿಕ ಗಣಹೋಮ, ಪ್ರತೀ ವರ್ಷ ಸಾಮೂಹಿಕ ದುರ್ಗಾಪೂಜೆ, ಪ್ರತೀ ವರ್ಷ ಸಾಮೂಹಿಕ ಚಂಡಿಕಾಹೋಮವು ಜರಗುತ್ತಿದ್ದು ಸೇವೆಯಲ್ಲಿ ಪಾಲ್ಗೊಳ್ಳುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ.

ಪ್ರತೀ ವರ್ಷದಂತೆ ಈ ಬಾರಿಯೂ ತಾ.19-12-2010ನೇ ಆದಿತ್ಯವಾರ ಉಡುಪಿ ಕುಂಜಿಬೆಟ್ಟು ಶಾರದಾ ಮಂಟಪದ ಶ್ರೀಶಾರದಾ ದೇವಸ್ಥಾನದ ಮುಂಭಾಗದಲ್ಲಿ ಸಾಮೂಹಿಕ ಚಂಡಿಕಾಹೋಮವು ಜರಗಿತು. ವೇ।ಮೂ. ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಮುಂಜಾನೆ 9 ಗಂಟೆಗೆ ಪ್ರಾರಂಭವಾದ ಚಂಡಿಕಾಹೋಮವು ಮಧ್ಯಾಹ್ನ 12-30 ಗಂಟೆಗೆ ಪೂರ್ಣಾಹುತಿಗೊಂಡಿತು. ಋತ್ವಿಜರು

(3ನೇ ಪುಟಕ್ಕೆ ...)

## ಪತ್ರಿಕೆಯ ಕೆಲಸವೆಂದರೆ ಮಗುವಿನ ಬೆಳವಣಿಗೆಯಂತೆ : ಎ. ಈಶ್ವರಯ್ಯ



ಮಗು ಹುಟ್ಟಿ ದೊಡ್ಡದಾಗಬೇಕಾದರೆ ಹೆತ್ತವರು ನಿಜಕ್ಕೂ ತ್ಯಾಗ ಮಾಡಬೇಕಿದೆ. ಹಾಗೆಯೇ ಅದು ಬೆಳೆದಾಗ ಸಂತೋಷವೂ ಆಗುತ್ತದೆ. ಅದರಂತೆ ಪತ್ರಿಕೆಯ ಹುಟ್ಟು, ಬೆಳವಣಿಗೆ ಎಲ್ಲಾ ಹೀಗೆ ಎಂದು ಖ್ಯಾತ ವಿಮರ್ಶಕ, ಹಿರಿಯ ಪತ್ರಕರ್ತರಾದ ಶ್ರೀ ಎ. ಈಶ್ವರಯ್ಯನವರು ಶ್ರೀ ಶಾರದಾ ಪತ್ರಿಕೆಯ ದಶಮಾನೋತ್ಸವದ ವಿಶೇಷ ಸಂಚಿಕೆಯನ್ನು ಬಿಡುಗಡೆಗೊಳಿಸಿ ತಿಳಿಸಿದರು.

ತಾ.14-12-2010ರಂದು ಶ್ರೀಶಾರದಾ ಪತ್ರಿಕೆಯ ದಶಮಾನೋತ್ಸವದ ವಿಶೇಷ ಸಂಚಿಕೆಯ ಬಿಡುಗಡೆ ಸಮಾರಂಭವು ಶಾರದಾ ಮಂಟಪದ ಜ್ಞಾನಮಂದಿರದಲ್ಲಿ ಜರಗಿತು. ಪ್ರಾರಂಭದಲ್ಲಿ ಕು। ಪ್ರಿಯಾ, ವೈಷ್ಣವಿ ಹೆಬ್ಬಾರ್ ಮತ್ತು ಮಾನಸ ಇವರಿಂದ ಪ್ರಾರ್ಥನೆ. ಆಗಮಿಸಿದ ಎಲ್ಲರನ್ನೂ ಸ್ವಾಗತಿಸಿ, ಪ್ರಸ್ತಾವನೆಯನ್ನು ಶ್ರೀಶಾರದಾ ಪತ್ರಿಕೆಯ ಪ್ರಧಾನ ಸಂಪಾದಕರೂ, ಆಡಳಿತ ಮಂಡಳಿಯ ನಿರ್ದೇಶಕರೂ ಆದ ಶ್ರೀ ವೈ. ಮೋಹನ್ ರಾವ್ ನೀಡಿದರು. ಅವರು ತಮ್ಮ ಪ್ರಸ್ತಾವನೆಯಲ್ಲಿ ಹಿಂದೆ ನಮ್ಮವರಿಗೆ ಉಪಾಕರ್ಮದಂತಹ ಸಮಾರಂಭಕ್ಕೂ ತೊಡಕುಂಟಾದಾಗ ಹಿರಿಯರು ಸೇರಿ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವನ್ನು ಹಾಗೂ ಶ್ರೀಶಾರದಾ ಮಂಟಪದ ನಿರ್ಮಾಣ ಕಾರ್ಯವನ್ನೂ

(3ನೇ ಪುಟಕ್ಕೆ ...)



## ಯುವ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಕುಂಜಿಬೆಟ್ಟು, ಉಡುಪಿ



### ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ-2011

ತಾ.23-01-2011ನೇ ರವಿವಾರ ಮಣಿಪಾಲದ ಮಣಿಪಾಲ ಪದವಿಪೂರ್ವ ಕಾಲೇಜು ಗ್ರೌಂಡ್ (ಎಂ.ಜೆ.ಸಿ.)ನಲ್ಲಿ ನಡೆಯಲಿದೆ.
ಆಸಕ್ತ ತಂಡಗಳು 15-01-2011ರೊಳಗೆ ಮೆನೇಜರ್ ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು (Ph : 0820-2520754), ದೇವದಾಸ್ ಶಾಸ್ತ್ರಿ ಆಳುಗ್ಗೇಲ್ ಹಿರಿಯಡ್ಕ (M : 9482046424), ಮಂಜುನಾಥ ಹೆಬ್ಬಾರ್, ಹೆಬ್ಬಾರ್ ಎಂಟರ್‌ಪ್ರೈಸಸ್, ಉಡುಪಿ (M : 9448437893, 9611099894) ಇವರಲ್ಲಿ ತಮ್ಮ ತಂಡದ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

ವಿ.ಸೂ. : 1) ಪಂದ್ಯಾವಳಿಯು ಓವರ್ ಆರ್ಮ್, ಟೆನ್ನಿಸ್‌ಬಾಲ್, ನಿಗದಿತ ಓವರ್‌ಗಳಂತೆ ನಡೆಯುತ್ತದೆ. 2) ಪಂದ್ಯಾವಳಿಯು ನಮ್ಮ ಸಮಾಜ ಬಾಂಧವರಿಗೆ ಮಾತ್ರ ಸೀಮಿತವಾಗಿದೆ. 3) ತಂಡಗಳು ಪಂದ್ಯಾಟದ ದಿನ ಬೆಳಿಗ್ಗೆ 8-30ಕ್ಕೆ ಕ್ರೀಡಾಂಗಣದಲ್ಲಿ ಹಾಜರಿದ್ದು ಸಹಕರಿಸಬೇಕು. 4) ಅಲೆವೂರು ದಿ। ಭುಜಂಗ ರಾವ್ ಮತ್ತು ದಿ। ಶಾಂತಾ ದೇವಿ ಸ್ಮರಣಾರ್ಥ ಅವರ ಪುತ್ರ ಅಲೆವೂರು ಶ್ಯಾಮರಾವ್ ನೀಡಿದ ರೂ.2501/- ಮತ್ತು ರೂ.1001/- ನಗದು ಬಹುಮಾನವನ್ನು ವಿಜೇತ ತಂಡಗಳಿಗೆ ವಿತರಿಸಲಾಗುವುದು.

ಶ್ರೀಶಾರದಾ ಟ್ರೋಫಿಯ ಸಮಾರೋಪ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀ ಕಿರಣ್‌ಕುಮಾರ್ (ಉಡುಪಿ ನಗರಸಭಾ ಅಧ್ಯಕ್ಷರು) ಹಾಗೂ ಡಾ।ಬಿ.ಎಚ್.ಆನಂದರಾವ್ (ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯ ಪ್ರಖ್ಯಾತ ಶಸ್ತ್ರಚಿಕಿತ್ಸಾ ವೈದ್ಯರು) ಇವರು ಆಗಮಿಸಲಿದ್ದಾರೆ.
ಇದೇ ದಿನ 10ನೇ ತರಗತಿಯವರೆಗಿನ ಮಕ್ಕಳಿಗೆ **ಜೂನಿಯರ್ ಕ್ರಿಕೆಟ್ ಪಂದ್ಯಾಟ**ವೂ ನಡೆಯಲಿದೆ. ಆಸಕ್ತ ತಂಡಗಳು ಬೆಳಿಗ್ಗೆ 8-30ಕ್ಕೆ ಹಾಜರಿರಬೇಕಾಗಿ ಅಪೇಕ್ಷೆ.
ಕ್ರಿಕೆಟ್ ಪಂದ್ಯಾಟಕ್ಕೆ ಪ್ರಾಯೋಜಕರಾಗಿ, ದಾನಿಗಳಾಗಿ ಹಾಗೂ ಬ್ಯಾನರ್ ಪ್ರದರ್ಶಿಸ ಬಯಸುವವರು ಶಾರದಾ ಮಂಟಪದ ಮ್ಯಾನೇಜರ್‌ರವರನ್ನು ಮುಂಚಿತವಾಗಿ ಸಂಪರ್ಕಿಸಬಹುದು.

- ಅಧ್ಯಕ್ಷರು ಮತ್ತು ಸಂಚಾಲಕರು, ಕ್ರೀಡಾ ವೇದಿಕೆ

ತಾ.23-01-2011 ಬೆಳಿಗ್ಗೆ ಗಂಟೆ 9-00ರಿಂದ **ಮಹಿಳೆಯರು ಮತ್ತು ಮಕ್ಕಳಿಗಾಗಿ** ಶ್ರೀಶಾರದಾ ಮಂಟಪದಲ್ಲಿ

### ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.

**ಮಕ್ಕಳ ಮತ್ತು ಮಹಿಳಾ ವಿಭಾಗದ ಸ್ಪರ್ಧೆಗಳ ವಿವರ :** 1) 3-5 ವರ್ಷದೊಳಗಿನ ಮಕ್ಕಳಿಗೆ - ಚಾಟುಕೋಳಿ ನಡಿಗೆ, ಪಾಸಿಂಗ್ ದಿ ಬಾಲ್ 2) 1ರಿಂದ 3ನೇ ತರಗತಿವರೆಗಿನ ಮಕ್ಕಳಿಗೆ - ಒಂಟಿ ಕಾಲಿನ ಓಟ, ಮಣಿ ಹೆಕ್ಕುವುದು 3) 4ರಿಂದ 6ನೇ ತರಗತಿವರೆಗಿನ ಮಕ್ಕಳಿಗೆ - ನೆನಪು ಶಕ್ತಿ, ಮಣಿ ಪೋಣಿಸುವುದು 4) 7ರಿಂದ 10ನೇ ತರಗತಿ ವರೆಗಿನ ಮಕ್ಕಳಿಗೆ - ಸ್ಕಿಪಿಂಗ್ (ಹಗ್ಗ ಅವರೇ ತರಬೇಕು), ಲಿಂಬೆಹಣ್ಣಿನ ಓಟ 5) ಮಹಿಳೆಯರಿಗಾಗಿ - ಸಂಗೀತ ಕುರ್ಚಿ, ಮೇಣದ ಬತ್ತಿ ಉರಿಸುವುದು. 6) ಹಿರಿಯ ನಾಗರಿಕ ಮಹಿಳೆಯರಿಗಾಗಿ - ತಲೆಯ ಮೇಲೆ ಪುಸ್ತಕ ಇಟ್ಟು ನಡೆಯುವುದು. ಮಹಿಳೆಯರು ಮತ್ತು ಮಕ್ಕಳು ಆಸಕ್ತಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ. ಇದೇ ದಿನ ವಧುವರರ ಮಾಹಿತಿ ಸಂಗ್ರಹ ಕಾರ್ಯಕ್ರಮವನ್ನು ಮಹಿಳಾ ವೇದಿಕೆಯು ಆಯೋಜಿಸಿದೆ. ವಧೂವರರ ಪಾಲಕರು ಹೆಚ್ಚಿನ ಸಂಖ್ಯೆಯಲ್ಲಿ ಈ ವೇದಿಕೆಯ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ವಿನಂತಿ. ಹೆಸರನ್ನು ನೋಂದಾಯಿಸುವವರು ವಧುವರರ ಭಾವಚಿತ್ರ, ಜಾತಕದ ಪ್ರತಿ, ಇತ್ಯಾದಿ ವಿವರಗಳನ್ನು ನೀಡಿ ವೇದಿಕೆಯಲ್ಲಿ ನೋಂದಾಯಿಸಬಹುದು. ಶ್ರೀಶಾರದಾ ಪತ್ರಿಕೆಯಲ್ಲಿ ವಧುವರರ ಮಾಹಿತಿಯನ್ನು ನೀಡಲು ಆಸಕ್ತಿಯುಳ್ಳವರು ಒಪ್ಪಿಗೆಯನ್ನು ನೀಡಬಹುದು.

- ಅಧ್ಯಕ್ಷರು ಮತ್ತು ಸಂಚಾಲಕರು, ಮಹಿಳಾ ವೇದಿಕೆ

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಎಚ್.ಎನ್. ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.
-ಸಂ.

## ಚಿಂತನ

ಸಣ್ಣ ಮಕ್ಕಳ ಬೆಳವಣಿಗೆಯಲ್ಲಿ ಪೋಷಕರ ಪಾತ್ರ ಹಿರಿದಾದುದು. ಇತ್ತೀಚಿನ ದಿನಗಳಲ್ಲಿ ಹೆತ್ತವರು ತಮ್ಮ ಜವಾಬ್ದಾರಿಯನ್ನು ಕಳೆದುಕೊಂಡಂತೆ ಕಾಣುತ್ತದೆ.

ಶಾಲೆಗೆ ಹೋಗುವ ಒಂದು, ಎರಡನೇ ತರಗತಿಯಿಂದಲೇ ವಿದ್ಯಾರ್ಥಿಗಳ ಮೇಲೆ ಕಲಿಕೆಯ ಹೇರಿಕೆಯನ್ನು ಮಾಡುತ್ತಿದ್ದಾರೆಯೇ? ಬೆಳಿಗ್ಗೆ ಎದ್ದಾಗ ಪ್ರಾರಂಭಗೊಂಡ ಈ ಕಲಿಕೆ ಎಂಬ ಪ್ರಹಸನ, ಶಾಲೆ-ಶಾಲೆಯಿಂದ ಬಂದ ನಂತರ ಮನೆ ಪಾಠ (Tution) ನಂತರ ಮನೆ ಕೆಲಸದೊಂದಿಗೆ ತಡ ರಾತ್ರಿಯ ವರೆಗೂ ನಡೆದು ಬಿಡುತ್ತದೆ.

ನಲಿಯುತ್ತಾ, ಕುಣಿಯುತ್ತಾ ಉಲ್ಲಸಿತರಾಗಿರಬೇಕಾದ ಹರೆಯದಲ್ಲಿ ಈ ಚಿಕ್ಕ ಮಕ್ಕಳು ಅದರಿಂದ ವಂಚಿತರಾಗುತ್ತಾರೆ. ಮನಸ್ಸಿನಲ್ಲಿ ಕಲಿಕೆ, ಪರೀಕ್ಷೆ ಮೊದಲಾದ ಭೀತಿಯಿಂದ ಒದ್ದಾಡುತ್ತಿರುತ್ತಾರೆ. ಈ ಮೂಲಕ ತಮ್ಮ ಜೀವನದ ಅಮೂಲ್ಯ ಆಯುಷ್ಯದಲ್ಲಿ ಮಾನಸಿಕ ಖಿನ್ನತೆಗೆ ಒಳಗಾಗುತ್ತಾರೆ.


ಹೀಗೆ ರ್‍ಯಾಂಕ್ ಗಳಿಸಬೇಕು, ಗ್ರೇಡ್ ಪಡೆಯಬೇಕೆಂಬ ಪೋಷಕರ, ಹೆತ್ತವರ, ಶಿಕ್ಷಕರೆಲ್ಲರ ಹಠ ಸ್ವಭಾವಕ್ಕೆ ಮಗು ಬಲಿಯಾಗುತ್ತದೆ.

ಇಡೀ ದಿನದಲ್ಲಿ ಒಂದು ಗಂಟೆಯಾದರೂ ವಿದ್ಯಾರ್ಥಿಗಳಾದ ಮಕ್ಕಳು ಆಟದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ಈ ಮೂಲಕ ಮಾನಸಿಕ ಉಲ್ಲಾಸ ಹೆಚ್ಚಿಸಿಕೊಳ್ಳಬೇಕು. ದೈಹಿಕ ವಿಕಾಸದೊಂದಿಗೆ ಉತ್ತಮ ಆರೋಗ್ಯವಂತರಾಗಬೇಕು. ವೈಯಕ್ತಿಕ ಸ್ಫೂರ್ತಿಯೊಂದಿಗೆ ಗುಂಪು ಸ್ಫೂರ್ತಿಯ ಅನುಭವ ಪಡೆಯಬೇಕು. ಏಕಾಗ್ರತೆ, ಧ್ಯಾನದ ವೃದ್ಧಿಯಾಗುವುದರಿಂದ ಬೌದ್ಧಿಕ ವಿಕಾಸವನ್ನು ಪಡೆದುಕೊಳ್ಳಬೇಕು. ಮುಕ್ತ ಮಾತುಕತೆ, ಪರಸ್ಪರ ಹೊಂದಾಣಿಕೆಯ ಸ್ವಭಾವವನ್ನು ಕಲಿತುಕೊಳ್ಳಬೇಕು. ಇತರರನ್ನು ಗೌರವಿಸುವ, ಪ್ರೋತ್ಸಾಹಿಸುವ ಗುಣವನ್ನು ತಮ್ಮದಾಗಿಸಿಕೊಳ್ಳಬೇಕು. ಹೀಗೆ ತನ್ನ ಸರ್ವಾಂಗೀಣ ಪ್ರಗತಿಗೆ ಕಾರಣವಾದ ಆಟವನ್ನು ಗುಂಪಾಗಿ, ವೈಯಕ್ತಿಕವಾಗಿ ಆಡುತ್ತಿರಬೇಕು.

ಈ ಬಗ್ಗೆ ಪೋಷಕರು, ಹೆತ್ತವರು, ಶಿಕ್ಷಕರು ಚಿಂತಿಸಬೇಕಲ್ಲವೇ.

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



– ಕೆ. ಆತ್ಮಾರಾಮ ಶಾಸ್ತ್ರಿ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ಅತುಲ ಬಲಶಾಲಿಗಳಾದ ರಾಮ, ಕೃಷ್ಣರು 'ಹಾಗೇ ಆಗಲಿ' ಎಂದು ಒಪ್ಪಿಕೊಂಡು ಪ್ರಭಾಸ ಕ್ಷೇತ್ರದಲ್ಲಿ ಸಮುದ್ರ ತೀರಕ್ಕೆ ಹೋಗಿ ಅಲ್ಲಿ ಒಂದು ಕ್ಷಣ ಕುಳಿತುಕೊಂಡರು. ಸಮುದ್ರ ರಾಜನು ರಾಮ, ಕೃಷ್ಣರನ್ನು ಗುರುತಿಸಿ ಕೂಡಲೆ ಬಂದು ಅವರನ್ನು ಪೂಜಿಸಿದನು. ಆಗ ಭಗವಂತನಾದ ಕೃಷ್ಣನು ಹೇಳಿದನು, ''ನಿನ್ನ ದೊಡ್ಡ ದೊಡ್ಡ ಅಲೆಗಳ ಮೂಲಕ ನೀನು ನಮ್ಮ ಗುರುಗಳ ಮಗನನ್ನು ನುಂಗಿದ್ದೀ ತಾನೆ? ಅವನನ್ನು ಬೇಗನೆ ತಂದೊಪ್ಪಿಸು''

ಆಗ ಸಮುದ್ರರಾಜನು ಕೈ ಮುಗಿದುಕೊಂಡು ಹೇಳಿದನು, ''ಕೃಷ್ಣ ನಾನು ಗುರು ಪುತ್ರನನ್ನು ಒಯ್ದಿಲ್ಲ. ನೀರಿನೊಳಗೆ ಶಂಖರೂಪದಲ್ಲಿರುವ ಪಂಚಜನನೆಂಬ ದೈತ್ಯನೇ ಅವನನ್ನು ನುಂಗಿದ್ದು''. ಇದನ್ನು ಕೇಳಿ ಶ್ರೀಕೃಷ್ಣನು ಕೂಡಲೆ ನೀರಿನೊಳಗೆ ಹೋಗಿ ಪಂಚಜನನನ್ನು ಕೊಂದು ಅವನ ಹೊಟ್ಟೆಯನ್ನು ಬಗೆದು ನೋಡಿದನು. ಆದರೆ ಅಲ್ಲಿ ಗುರುಪುತ್ರನಿರಲಿಲ್ಲ. ಆಗ ಭಗವಂತನು ಅವನ ಹೊಟ್ಟೆಯಲ್ಲಿದ್ದ ಒಂದು ಶಂಖವನ್ನೆತ್ತಿಕೊಂಡು ಮೇಲೆ ಬಂದನು. ಅದೇ ಶಂಖ ಮುಂದೆ ಪಾಂಚಜನ್ಯವೆಂದು ಪ್ರಸಿದ್ಧವಾಯಿತು. ಮೇಲೆ ಬಂದ ಕೃಷ್ಣ ಪರಮಾತ್ಮನು ಬಲರಾಮನನ್ನು ಕರೆದುಕೊಂಡು ಯಮನ ಪ್ರೀತಿಯ ನಗರವಾದ ಸಂಯಮನಿಗೆ ಹೋದನು. ಅಲ್ಲಿ ಪಾಂಚಜನ್ಯವನ್ನು ಊದಿದನು. ಅದನ್ನು ಕೇಳಿದ ಯಮನು ಓಡೋಡಿ ಬಂದು ಅವರಿಬ್ಬರನ್ನು ಭಕ್ತಿಯಿಂದ ಸ್ವಾಗತಿಸಿ, ಉಪಚರಿಸಿದನು. ತನ್ನಿಂದ ಏನು ಸೇವೆಯಾಗಬೇಕೆಂದು ಕೇಳಿದನು. ಶ್ರೀಕೃಷ್ಣನೆಂದನು, ''ಯಮರಾಜ, ಜೀವಿಗಳು ತಂತಮ್ಮ ಕರ್ಮಾನುಸಾರ ಮರಣ ಹೊಂದುತ್ತಾರೆ. ಆ ಕಾರ್ಯವನ್ನು ಮಾಡುವುದು ನಿನ್ನ ಧರ್ಮ. ಆದರೆ ಈಗ ನನ್ನಾಜ್ಞೆಯಂತೆ ನನ್ನ ಗುರುಪುತ್ರನನ್ನು ತಂದು ನನಗೊಪ್ಪಿಸು''. ಯಮನು ಅದಕ್ಕೊಪ್ಪಿ ಸಾಂದೀಪನಿಯ ಮಗನನ್ನು ತಂದು ಭಗವಂತನಿಗೆ ಒಪ್ಪಿಸಿದನು. ರಾಮ, ಕೃಷ್ಣರು ಆ ಹುಡುಗನನ್ನು ಕರೆದುಕೊಂಡು ಆಶ್ರಮಕ್ಕೆ ಬಂದು ಗುರುಗಳಿಗೊಪ್ಪಿಸಿದರು. ಹಾಗೇ ಬೇರೇನಾದರೂ ಬಯಕೆಗಳಿವೆಯೇ ಎಂದೂ ಕೇಳಿದರು. ಗುರುಗಳು ಬೇರೇನನ್ನೂ ಅಪೇಕ್ಷಿಸದೆ ಅವರನ್ನು ಹರಸಿ ಮಥುರೆಗೆ ಕಳುಹಿಸಿಕೊಟ್ಟರು.

### ೧೦

ವಸುದೇವನ ತಮ್ಮನಾದ ದೇವಭಾಗನ ಮಗ ಉದ್ಧವನೆಂಬವನೊಬ್ಬನಿದ್ದನು. ಅವನು ಶ್ರೀಕೃಷ್ಣನ ಪರಮಭಕ್ತನಾಗಿದ್ದನು. ಹಾಗೇ ವೃಷ್ಣಿವಂಶೀಯರಿಗೆ ಮಂತ್ರಿಯೂ, ಶ್ರೀಕೃಷ್ಣನ ಆಪ್ತಮಿತ್ರನೂ ಆಗಿದ್ದನು. ಅವನು ಬೃಹಸ್ಪತಿಯ ಹತ್ತಿರವೇ ಶಿಷ್ಯವೃತ್ತಿ ಮಾಡಿ ಬಹಳ ಮೇಧಾವಿಯೆನಿಸಿದ್ದನು.

ಒಂದು ದಿನ ಶ್ರೀಕೃಷ್ಣನು ಉದ್ಧವನನ್ನು ಪ್ರೀತಿಯಿಂದ ಹತ್ತಿರ ಕರೆದು ಅವನ ಕೈಹಿಡಿದುಕೊಂಡು ಹೇಳಿದನು, ''ನನ್ನ ಪ್ರೀತಿಯ ಉದ್ಧವನೇ, ನೀನು ವ್ರಜ ಭೂಮಿಗೆ ಹೋಗು. ಅಲ್ಲಿ ನನ್ನ ಸಾಕು ತಂದೆ ತಾಯಿಯರಿಗೆ ನನ್ನ ಪ್ರೀತಿಯನ್ನು ತಿಳಿಸಿ ಅವರನ್ನು ಸಂತೋಷಪಡಿಸು. ಹಾಗೇ ನನ್ನ ವಿರಹದಿಂದ ಬೆಂದಿರುವ ಗೋಪಿಯರಿಗೆ ನನ್ನ ಸಂದೇಶವನ್ನು ತಲುಪಿಸಿ ಅವರ ಬೇಗುದಿಯನ್ನು ಹೋಗಲಾಡಿಸು. ಅವರು ನನ್ನಲ್ಲೇ ಪ್ರಾಣವನ್ನಿಟ್ಟುಕೊಂಡಿದ್ದಾರೆ. ನನಗಾಗಿ ಸರ್ವ ಧರ್ಮಗಳನ್ನು ಪರಿತ್ಯಜಿಸಿ ಶರಣಾಗಿದ್ದಾರೆ. ಅವರನ್ನು ಭರಿಸುವುದು, ಪೋಷಿಸುವುದು ನನ್ನ ಧರ್ಮ. ನಾನಿಲ್ಲಿಗೆ ಬಂದ ಅನಂತರ ಅವರ ಪರಿಸ್ಥಿತಿ ಅತ್ಯಂತ ಶೋಚನೀಯವಾಗಿದೆ. ನಾನಿಲ್ಲಿಗೆ ಹೊರಟು ಬರುವಾಗ ಪುನಃ ಹೋಗಿ ಅವರಿಗೆ ದರ್ಶನಕೊಡುವುದಾಗಿ ಮಾತುಕೊಟ್ಟಿದ್ದೇನೆ. ಅಂತೆಯೇ ನಾನಲ್ಲಿಗೆ ಹೋಗುವ ವಿಚಾರವನ್ನು ಅವರಿಗೆ ತಿಳಿಸು''.

ಉದ್ಧವನು ತನ್ನ ಸ್ವಾಮಿಯ ಸಂದೇಶವನ್ನು ಆದರದಿಂದ ತಲೆಯ ಮೇಲೆ ಹೊತ್ತುಕೊಂಡು ರಥವನ್ನೇರಿ ವ್ರಜದ ಕಡೆಗೆ ಹೋದನು. ನೇಸರು ಮುಳುಗುವ ಹೊತ್ತಿಗೆ ನಂದವ್ರಜವನ್ನು ತಲುಪಿದನು. ಆಗ ದನಕರುಗಳು ಹುಲ್ಲುಗಾವಲಿಂದ ಹಿಂದಿರುಗುತ್ತಿದ್ದವು. ಗೋಧೂಳಿಯಿಂದ ಅವನ ರಥವು ಮುಚ್ಚಿಹೋಯಿತು. ಗೋಕುಲವು ಸಾಯಂದೀಪ ಮತ್ತು ಧೂಪಗಳಿಂದ ಶೋಭಾಯಮಾನವಾಗಿ ಕಾಣಿಸುತ್ತಿತ್ತು. ಗೋವಳರ ವೇಣಿನಾದ, ರಾಮ, ಕೃಷ್ಣರ ಗುಣಗಾನ ಕೇಳಿಸುತ್ತಿತ್ತು.

ಉದ್ಧವನು ನಂದಗೋಪನ ಮನೆಯನ್ನು ತಲುಪುವ ಮೊದಲೇ ಅವನೇ ಮುಂದೆ ಬಂದು, ಬಂದವನು ಶ್ರೀಕೃಷ್ಣನೇ ಎಂಬಷ್ಟು ವಾತ್ಸಲ್ಯದಿಂದ ಬರಮಾಡಿಕೊಂಡನು. ಮಾರ್ಗಾಯಾಸ ಪರಿಹಾರವಾದ ಮೇಲೆ ಅವನಿಗೆ ಮೃಷ್ಟಾನ್ನ ಭೋಜನವನ್ನು ಉಣಬಡಿಸಿದನು. ಅವನು ವಿಶ್ರಾಂತಿ ಪಡೆಯುವಾಗ ನಂದನೂ, ಯಶೋದೆಯೂ ಅವನ ಬಳಿಗೆ ಬಂದು ಕುಳಿತರು. ನಂದನು ಮಾತನಾಡಿಸಿದನು, ''ವತ್ಸ, ನನ್ನ ಪ್ರಿಯ ಸಖನಾದ ವಸುದೇವನು ತನ್ನ ಮಕ್ಕಳ ಸಾಹಸದಿಂದಾಗಿ ಸೆರೆಯಿಂದ ಬಿಡುಗಡೆ ಹೊಂದಿದವನು ಸುಖಿಯಾಗಿರುವನೇ? ದೈವ ವಶಾತ್ ಕಂಸನು ತನ್ನ ಕರ್ಮಗಳಿಂದಾಗಿ ಇಹಲೋಕವನ್ನು ಬಿಟ್ಟು ಹೋಗಬೇಕಾಯಿತು. ಶ್ರೀಕೃಷ್ಣನು ನನ್ನನ್ನು, ಅವನ ತಾಯಿಯನ್ನು, ಅವನ ಗೆಳೆಯರಾದ ಗೋವಳರನ್ನು, ವ್ರಜವನ್ನು, ಗೋವುಗಳನ್ನು, ಗೋವರ್ಧನ ಪರ್ವತವನ್ನು ಜ್ಞಾಪಿಸಿಕೊಳ್ಳುತ್ತಿರುವನೇ? ನಮ್ಮನ್ನೆಲ್ಲ ಒಮ್ಮೆಯಾದರೂ ನೋಡಿಹೋಗಲು ಆ ಗೋವಿಂದನು ಬರುವನೇ? ಆ ಸುಂದರ ವಾಸುದೇವನು ನಮ್ಮನ್ನು ಎಷ್ಟೆಲ್ಲ ಸಂಕಟಗಳಿಂದ ಪಾರು ಮಾಡಿದ್ದಾನೆ! ನಿಜವಾಗಿಯೂ ಅವನದು ಅನಂತಲೀಲೆ. ನಾನಂತು ಯಾವಾಗಲೂ ಅವನನ್ನು ಸ್ಮರಿಸಿಕೊಳ್ಳುತ್ತಲೇ ಇರುತ್ತೇನೆ. ರಾಮನೂ, ಕೃಷ್ಣನೂ ಧರ್ಮ ಸಂಸ್ಥಾಪನೆಗಾಗಿಯೇ ಭೂಮಿಯ ಮೇಲೆ ಅವತರಿಸಿ ಬಂದ ಭಗವಂತರೆಂದು ಹಿಂದೆಯೇ ನಮಗೆ ಗರ್ಗಾಚಾರ್ಯರು ತಿಳಿಸಿರುವರು. ''ಹೀಗೆಂದ ನಂದನು ಕೃಷ್ಣನ ಒಂದೊಂದೇ ಲೀಲೆಯನ್ನು ನೆನೆಯುತ್ತಾ ನೆನೆಯುತ್ತಾ ಭಾವಾವೇಶಕ್ಕೊಳಗಾದನು. ಅವನ ಕಂಠ ಗದ್ಗದವಾಯಿತು. ಯಶೋದೆಯೂ ಶ್ರೀಕೃಷ್ಣನ ಬಾಲಲೀಲೆಗಳ ವರ್ಣನೆಯನ್ನು ಕೇಳುತ್ತಾ ಹರ್ಷಾಶ್ರುಗಳನ್ನು ಸುರಿಸುತ್ತಲೇ ಇದ್ದಳು. ಇದನ್ನೆಲ್ಲ ನೋಡಿದ ಉದ್ಧವನೂ ಪ್ರೇಮೋದ್ವಿಗ್ನನಾದನು. ಅವನೆಂದನು, ''ನಂದಗೋಪನೇ, ನೀವಿಬ್ಬರು ಪರಮಶ್ಲಾಘ್ಯರು. ನಿಮ್ಮ ಭಾಗ್ಯವೇ ಭಾಗ್ಯ. ನೀವು ಜಗತ್ಪಾಲಕನನ್ನೇ ಪಾಲಿಸಿದವರು, ಲಾಲಿಸಿದವರು. ಅವನ ಬಾಲಲೀಲೆಗಳನ್ನು ಕಂಡ ಭಾಗ್ಯಶಾಲಿಗಳು ನೀವು. ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುವ ಭಗವಂತ ನಿಮ್ಮ ಮಗನಾಗಿದ್ದನೆಂಬುದು ಎಂತಹ ಧನ್ಯತೆಯ ವಿಚಾರ! ಅವನ ಅವತಾರಲೀಲೆಗಳನ್ನು ಹೀಗೇ, ಇಷ್ಟೇ ಎಂದು ವರ್ಣಿಸಲಾಗುವುದಿಲ್ಲ. ಅವನೊಬ್ಬನೇ ಪರಮಾತ್ಮನಾಗಿರುವುದರಿಂದ ಅವನಿಗೆ ತನ್ನವರು, ಪರರು ಎಂಬ ಭೇದವಿರುವುದಿಲ್ಲ. ಏಕೆಂದರೆ ಅವನು ಅದ್ವಿತೀಯ. ನಾವೆಲ್ಲ ಅವನ ಮಾಯಾಲೀಲೆಯ ಗೊಂಬೆಗಳು''. ಹೀಗೆ ಉದ್ಧವನೂ, ನಂದಗೋಪನೂ ಮಾತಾಡುತ್ತಿದ್ದಂತೆ ಸೂರ್ಯೋದಯವೇ ಆಯಿತು.

(ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**

ಯದೀಚ್ಛಸಿ ವಶೀಕರ್ತುಂ ಜಗದೇಕೇನ ಕರ್ಮಣಾ। ಪರಾಪವಾದಸಸ್ಯೇಭ್ಯೋ ಗಾಂ ಚರಂತೀಂ ನಿವಾರಯ ॥

ಅಂದರೆ ನೀನು ಒಂದೇ ಒಂದು ಕೆಲಸದಿಂದ ಲೋಕವನ್ನು ವಶಪಡಿಸಿಕೊಳ್ಳಲು ಬಯಸುವೆಯಾದರೆ ಪರನಿಂದೆ ಎಂಬ ಹುಲ್ಲನ್ನು ಮೇಯಲು ಹೋಗುವ ಮಾತು ಎಂಬ ಹಸುವನ್ನು ಹಿಂದಿರುಗಿಸು.

**ಪುಸ್ತಕ ಪರಿಚಯ :**

''ಧೀರೂಭಾಯಿ ಅಂಬಾನಿ''
ಗೆಲುವಿನ ಹಾದಿಯಲ್ಲಿ
ಲೇಖಕರು : ಎ.ಜಿ.ಕೃಷ್ಣಮೂರ್ತಿ
ಕನ್ನಡಕ್ಕೆ : ಡಾ। ನಿರೂಪಮಾ
*ಪ್ರಕಾಶಕರು :* ವಾಸನ್ ಪಬ್ಲಿಕೇಷನ್ಸ್
25, ವಾಸನ್ ಟವರ್ಸ್, ಬೆಂಗಳೂರು-560053.
*ಬೆಲೆ:* ರೂ.75/-

''ಇದು... ಒಂದು ಸ್ಫೂರ್ತಿದಾಯಕ ಕಥೆ. ನಮ್ಮ ಕಾಲಕ್ಕೆ ಸೇರಿದ ಒಬ್ಬ ಅದ್ಭುತ ವ್ಯಕ್ತಿಗೆ ಸಂಬಂಧಿಸಿದ ವಿಷಯ!... ಕೇವಲ ತನ್ನ ಸಂಕಲ್ಪ ಬಲದಿಂದ ಒಬ್ಬ ಸಾಧಾರಣ ವ್ಯಕ್ತಿ ಅಸಾಧಾರಣ ಸಾಧಕನಾಗಿ ಬೆಳೆದಿದ್ದಕ್ಕೆ ಇದೊಂದು ಎಣೆಯಿಲ್ಲದ ಉದಾಹರಣೆ. ಶ್ರೀ ಧೀರೂಭಾಯಿ ಅಂಬಾನಿ ನನಗೆ ತಂದೆ, ಗುರು... ಆದರ್ಶ ನಾಯಕರು, ಒಬ್ಬ ಗ್ರಾಮೀಣ ಉಪಾಧ್ಯಾಯನ ಮನೆಯಲ್ಲಿ ಜನ್ಮತಾಳಿದ ಶ್ರೀ ಧೀರೂಭಾಯಿ ವ್ಯಾಪಾರವನ್ನು ಒಂದು ಚಳುವಳಿಯೋಪಾದಿಯಲ್ಲಿ ಆರಂಭಿಸಿದರು'' ಎಂದು ಮುಕೇಶ್ ಅಂಬಾನಿ ಈ ಕೃತಿಯ 'ಮೊದಲ ಮಾತು'ಗಳಲ್ಲಿ ತಿಳಿಸುತ್ತಾರೆ.

ಶ್ರೀ ಎ.ಜಿ.ಕೃಷ್ಣಮೂರ್ತಿಯವರು ಬರೆದ 'ಧೀರೂಭಾಯಿಜಮ್' ಗುಜರಾತಿನಲ್ಲಿ ಕೆಲ ಮ್ಯಾನೇಜ್‌ಮೆಂಟ್ ಕೋರ್ಸ್‌ಗಳಿಗೆ ಪಠ್ಯ ಪುಸ್ತಕವಾಗಿದೆ.

''ನಿಮ್ಮ ಪುಸ್ತಕ ಧೀರೂಭಾಯಿಜಮ್ ಒಬ್ಬ ಶಿಕ್ಷಕನಂತೆ, ಊಟಕ್ಕೆ ಮುಂಚೆ ಹಸಿವೆಯನ್ನು ಹೆಚ್ಚಿಸಲು ನಾವು ಕುಡಿಯುವ 'ಎಪಿಟೈಸರ್' (ರುಚಿಯನ್ನು ಹೆಚ್ಚಿಸುವ ಪಾನೀಯ)ನಂತೆ ಕೆಲಸ ಮಾಡಿತೇ ಹೊರತು ನಮ್ಮ ಹಸಿವೆಯನ್ನು ತೀರಿಸಲಿಲ್ಲ. ನಮ್ಮ ಬಾಯಾರಿಕೆಯನ್ನು ಪೂರ್ತಿಯಾಗಿ ಹೋಗಲಾಡಿಸಲಿಲ್ಲ ಎಂದು ವಿಮರ್ಶಿಸುತ್ತಾ ಹಲವಾರು ಟೆಲಿಫೋನ್ ಕರೆಗಳು, ಇ-ಮೇಲ್‌ಗಳು ನನಗೆ ಬಂದವು. ನನಗೆ ಶ್ರೀ ಧೀರೂಭಾಯಿ ಕುರಿತು ಇನ್ನೊಂದು ಪುಸ್ತಕ ಬರೆಯುವುದಕ್ಕೆ ಇದೇ ಪ್ರೇರಣೆಯಾದವು'' ಎಂಬುದು ಈ ಕೃತಿಯ ಲೇಖಕರಾದ ಎ.ಜಿ.ಕೃಷ್ಣಮೂರ್ತಿಯವರ ಮಾತು.

''ಏನನ್ನಾದರೂ ಸಾಧಿಸಬೇಕೆಂಬ ಹಂಬಲವುಳ್ಳ ಪ್ರತಿಯೊಬ್ಬರಿಗೂ ದಾರಿದೀಪದಂತಿರುವ ಧೀರೂಬಾಯಿಯವರ ಜೀವನಯಾನವನ್ನು ಈ ಕೃತಿ ಚಿತ್ರಿಸುತ್ತದೆ. ಆರ್ಥಿಕ ಕ್ಷೇತ್ರದ ದಿಗ್ಗಜಗಳಂತಿರುವ ಅಂಬಾನಿ, ಮಿತ್ತಲ್ ಮನೆತನದವರು ತಮ್ಮ ಸಾಧನೆಯಿಂದ ಇಡೀ ವಿಶ್ವವನ್ನೇ ಬೆರಗುಗೊಳಿಸಿದ್ದಾರೆ... ಇದನ್ನು ಓದಿ ಹಿರಿಯರಾದವರು ತಮ್ಮ ಮಕ್ಕಳಿಗೆ ಪ್ರೋತ್ಸಾಹವಿತ್ತಲ್ಲಿ, ನಮ್ಮ ಯುವಜನತೆ ಧೀರೂಭಾಯಿಯವರ ಸಾಧನೆಗಳು ತಮಗೆ ಮಾರ್ಗದರ್ಶಕವೆಂದು ತಿಳಿದಲ್ಲಿ ಲೇಖಕರ ಪ್ರಯತ್ನ ಸಾರ್ಥಕವಾಗುವುದೆಂಬ ನಂಬಿಕೆ ನನಗಿದೆ'' ಹೀಗೆಂದು ಅನುವಾದಕರಾದ ಡಾ। ಅನುಪಮಾ ತಿಳಿಸುತ್ತಾರೆ.

ಈ ಕೃತಿಯ ಮೂಲ ಲೇಖಕರಾದ ಎ.ಜಿ.ಕೃಷ್ಣಮೂರ್ತಿಯವರು 23 ವರ್ಷದ ನಾಯಕತ್ವದಲ್ಲಿ 'ಮುದ್ರ ಕಮ್ಯುನಿಕೇಷನ್ಸ್ ಲಿಮಿಟೆಡ್' 844 ಪ್ರಶಸ್ತಿಗಳನ್ನು, ಬಹುಮಾನಗಳನ್ನು ಗೆದ್ದುಕೊಂಡಿದೆ. ಪ್ರಸ್ತುತ ಇವರು 'ಎ.ಜಿ.ಕೆ. ಬ್ರಾಂಡ್ ಕನ್ಸಲ್ಟಿಂಗ್'ಗೆ ಚೇರ್ಮನ್ ಆಗಿದ್ದಾರೆ. ಇದುವರೆಗೆ ಇಂಗ್ಲೀಷ್‌ನಲ್ಲಿ ನಾಲ್ಕು, ತೆಲುಗಿನಲ್ಲಿ ಎಂಟು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇದು ಒಂಭತ್ತನೆಯ ಪುಸ್ತಕ. ಇವರ ಎಲ್ಲ ಪುಸ್ತಕಗಳು ಪುನರ್ ಮುದ್ರಣಗೊಂಡು ಓದುಗರ ಪ್ರೀತಿಯನ್ನು ಪಡೆದವುಗಳೇ ಎಂದು ಕೃತಿಯ ಬೆನ್ನುಡಿಯಲ್ಲಿ ತಿಳಿಸಲಾಗಿದೆ.

'ಗೆಲುವಿನ ಹಾದಿ' ಇಂದು ಭಾರತದ ಮನೆ ಮಾತಾಗಿರುವ ರಿಲಾಯನ್ಸ್ ಪಿತನ ಅದ್ಭುತ ಗಾಥೆ.

ಇಂದಿನ ಯುವಜನತೆಗೆ ಸ್ಫೂರ್ತಿ, ಉತ್ಸಾಹ ಮೂಡಿಸುವ ಮಾರ್ಗದರ್ಶಕ ಕೃತಿ ಇದಾದ್ದರಿಂದ ಈ ಪುಸ್ತಕದ ಪರಿಚಯವನ್ನು ನೀಡಲಾಗಿದೆ.

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರ್ಕಳ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್.

## ಪತ್ರಿಕೆಯ ಕೆಲಸವೆಂದರೆ ಮಗುವಿನ ಬೆಳವಣಿಗೆಯಂತೆ : ಎ. ಈಶ್ವರಯ್ಯ

(....1ನೇ ಪುಟದಿಂದ)

ಉಡುಪಿ ಕುಂಜಿಬೆಟ್ಟಿನಲ್ಲಿ ಮಾಡಿದರು. ಸಂಘದ ಆಶ್ರಯದಲ್ಲಿ ಯುವ ವೇದಿಕೆ ಮತ್ತು ಮಹಿಳಾ ವೇದಿಕೆ ವತಿಯಿಂದ ಹತ್ತು ವರ್ಷಗಳ ಹಿಂದೆ ಶ್ರೀಶಾರದಾ ಪತ್ರಿಕೆಯನ್ನು ಪ್ರಾರಂಭಿಸಲಾಯಿತು. ಈಗ ಈ ಪತ್ರಿಕೆಯ ಸುಮಾರು 1500 ಪ್ರತಿಗಳು ಹೊರ ಬಂದು ಸಮಾಜದ ಎಲ್ಲರ ಮನೆ ತಲುಪುತ್ತಿದೆ. ಇವೆಲ್ಲವೂ ನರಶಾರ್ದೂಲ ಶಕ್ತಿ. ಇದಕ್ಕಾಗಿ ಶ್ರಮಿಸಿದ ಎಲ್ಲರಿಗೂ ಶ್ರೀಶಾರದಾ ಬಳಗ ಚಿರಋಣಿ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾದ ಈಶ್ವರಯ್ಯನವರ ಪರಿಚಯ ಭಾಷಣವನ್ನು ಉಪಸಂಪಾದಕರಾದ ಶ್ರೀ ಎಚ್.ಎನ್. ಶ್ಯಾನುಭಾಗ್‌ರವರು ಮಾಡಿದರು. ಈಶ್ವರಯ್ಯನವರು ಪತ್ರಿಕೆಯ ವಿಶೇಷ ಸಂಚಿಕೆಯನ್ನು ಬಿಡುಗಡೆಗೊಳಿಸಿ, ಪತ್ರಿಕೆಯು ಉತ್ತಮವಾಗಿ ಮೂಡಿಬರುತ್ತಿದೆ, ಪ್ರತಿ ತಿಂಗಳ ಸಂಚಿಕೆಯೂ ಸ್ಥಾನಿಕ ಸಮಾಜದ ವಿವಿಧ ಚಟುವಟಿಕೆ, ಸುದ್ದಿಗಳನ್ನು ಒಳಗೊಂಡು ಆಕರ್ಷಕವಾಗಿದೆ. ಒಂದು ಸಮಾಜದ ಸಣ್ಣ ಪತ್ರಿಕೆಯು ಹತ್ತು ವರ್ಷಗಳನ್ನು ಪೂರೈಸಿದೆ ಎಂದರೆ ಉತ್ತಮ ಸಾಧನೆಯೇ ಸರಿ. ಆದರೆ ಜವಾಬ್ದಾರಿ ಹೆಚ್ಚಿದೆ. ಮನರಂಜನೆ, ವಿಮರ್ಶೆ, ಮಕ್ಕಳ ಪುಟ ಇತ್ಯಾದಿ ಸೇರಿಸಿಕೊಳ್ಳಬಹುದೆಂದು ಸಲಹೆ ನೀಡಿದರು.

ಶ್ರೀಶಾರದಾ ಪತ್ರಿಕೆಯ ಹಿಂದಿನ ಪ್ರಧಾನ ಸಂಪಾದಕರಾಗಿದ್ದ ಶ್ರೀ ವೇಣುಗೋಪಾಲ ರಾವ್‌ರವರು ಆರಂಭದ ದಿನಗಳ ಕಷ್ಟಗಳನ್ನು ನೆನೆಸುತ್ತಾ ಸಮಾಜದ ಕೆಲವರ ಟೀಕಾ ಪ್ರಹಾರಗಳನ್ನು ಲೆಕ್ಕಿಸದೆ ಮುನ್ನಡೆದು ಹತ್ತು ವರ್ಷ ಉತ್ತಮ ರೀತಿಯಿಂದ ಪತ್ರಿಕೆ ನಡೆದಿದೆ. ಮುಂದೆಯೂ ಚೆನ್ನಾಗಿ ಮೂಡಿಬರಲಿ ಎಂದು ಹಾರೈಸುತ್ತಾ ಈಗಿನ ಸಂಪಾದಕ ಮಂಡಳಿಗೆ ಶುಭ ಹಾರೈಸಿದರು. ಹಿಂದಿನ ಇನ್ನೊಬ್ಬ ಪ್ರಧಾನ ಸಂಪಾದಕರಾಗಿದ್ದ ಮಟ್ಟು ಕೃಷ್ಣಕುಮಾರ್‌ರವರು ಪತ್ರಿಕೆಯ ಹಿಂದೆ ಬೇಕಾಗುವ ಪರಿಶ್ರಮದ ಬಗ್ಗೆ, ಹಿಂದೆ ಇದ್ದ ಯುವ ವಿಭಾಗದ ಸದಸ್ಯರ ಸೇವೆ ಹಾಗೂ ಪ್ರಾಯೋಜಕತ್ವ ಮತ್ತು ಎಲ್ಲಾ ಸಂಪಾದಕರ ವಿವರವನ್ನು ನೀಡಿ ಶುಭ ಹಾರೈಸಿದರು.

ಸಂಘದ ನಿರ್ದೇಶಕರೂ, ಬ್ರಹ್ಮಾವರದ ಎಸ್‌ಎಮ್‌ಎಸ್ ಪದವಿ ಕಾಲೇಜಿನ ಪ್ರಾಧ್ಯಾಪಕರೂ ಆದ ಡಾ। ವೈ. ರವೀಂದ್ರನಾಥ ರಾವ್ ಈ ವಿಶೇಷ ಸಂಚಿಕೆಯು ಅಚ್ಚುಕಟ್ಟಾಗಿದ್ದು ಇದು 10 ವರ್ಷದ ಸಾಧನೆ, ಈಶ್ವರಯ್ಯನವರಿಗೆ ಉಡುಪಿಯಲ್ಲಿ ಅಭಿನಂದನೆ ನಡೆದ ಸಂದರ್ಭ ಮತ್ತು ಅವರಿಂದಲೇ ಪತ್ರಿಕೆಯ ಬಿಡುಗಡೆಗೊಳ್ಳುತ್ತಿರುವುದು ಸಂದರ್ಭೋಚಿತವಾಗಿದೆ, ವೈ.ಮೋಹನ್‌ರಾವ್ ಹಾಗೂ ಎಲ್ಲರ ಶ್ರಮದ ಫಲವಾಗಿ ಪತ್ರಿಕೆ ಉತ್ತಮವಾಗಿ ವರ್ಣಮಯವಾಗಿ ಮೂಡಿಬಂದಿದೆ ಎಂದರು.

ಶ್ರೀ ಮ.ನಾ.ಹೆಬ್ಬಾರ್‌ರವರು ಶ್ರೀಶಾರದಾ ಪತ್ರಿಕೆಯ ಬಗ್ಗೆ ವಾರ್ಧಿಕ ಷಟ್ಪದಿ ಯಲ್ಲಿ ರಚಿಸಿದ ಕವನವನ್ನು ವಾಚಿಸಿ ಸಭಿಕರ ಮನರಂಜಿಸಿದರು. ಪ್ರಾರಂಭದಲ್ಲಿ ಯುವ ವಿಭಾಗ ಇರುವಾಗ ನಡೆಸಿದ ಪತ್ರಿಕೆಯಲ್ಲಿ, ದುಡಿದವರು ಹಲವರು. ಅವರೆಲ್ಲರ ಪರವಾಗಿ ವೈ.ಮುರಲೀಕೃಷ್ಣ ರಾವ್ ಅವರನ್ನು ಸಂಘದ ಅಧ್ಯಕ್ಷರಾದ ಸಿ.ಎಸ್. ರಾವ್ ಹೂ ನೀಡಿ ಗೌರವಿಸಿದರು. ಅಂತೆಯೇ ಪತ್ರಿಕೆಗೆ ಲೇಖನಗಳನ್ನು ನೀಡಿದ ಎಲ್ಲ ಲೇಖಕರ ಪರವಾಗಿ ಮ.ನಾ.ಹೆಬ್ಬಾರರನ್ನು ಹೂ ನೀಡಿ ಅಧ್ಯಕ್ಷರು ಗೌರವಿಸಿದರು. ಪತ್ರಿಕೆಯ ಬಿಡುಗಡೆಗಾಗಿ ಸಹಕಾರವನ್ನಿತ್ತು ಶ್ರಮಿಸಿದ ಬೈಲೂರಿನ ಶ್ರೀನಿಧಿ ಗ್ರಾಫಿಕ್ಸ್‌ನ ಶ್ರೀ ಯತೀಶ್ ಹಾಗೂ ಉಡುಪಿ ರಥಬೀದಿಯ ಅಗ್ರಹಾರ ಪ್ರಿಂಟರ್‍ಸ್‌ನ ಶ್ರೀ ವಿಷ್ಣುಮೂರ್ತಿ ತಂತ್ರಿಯವರನ್ನು ಕಾರ್ಯದರ್ಶಿ ಶ್ರೀ ಬಿ.ಕೃಷ್ಣಮೂರ್ತಿರಾವ್ ಹಾಗೂ ಖಜಾಂಚಿ ಡಾ। ವೈ.ಸುದರ್ಶನ್‌ರಾವ್ ಹೂ ನೀಡಿ ಗೌರವಿಸಿದರು.

ಅಧ್ಯಕ್ಷೀಯ ಭಾಷಣ ಮಾಡಿದ ಸಂಘದ ಅಧ್ಯಕ್ಷರಾದ ಸಿ.ಎಸ್.ರಾವ್‌ರವರು ಶ್ರೀಶಾರದಾ ಪತ್ರಿಕೆಯ ವಿಶೇಷ ಸಂಚಿಕೆಯು ಬಿಡುಗಡೆಯಾದ ಸಂದರ್ಭದಲ್ಲಿ ಶುಭವನ್ನು ಹಾರೈಸಿ, ಶ್ರೀಶಾರದಾ ಪತ್ರಿಕೆಯ ಸಂಪಾದಕ ಮಂಡಳಿ ಮತ್ತು ಪತ್ರಿಕೆಗಾಗಿ ದುಡಿದ, ದುಡಿಯುತ್ತಿರುವ ಎಲ್ಲರನ್ನೂ ಅಭಿನಂದಿಸಿದರು. ಶ್ರೀಶಾರದಾ ಪತ್ರಿಕೆ ಸಂಘದ ಮುಖವಾಣಿಯಾಗಿ ಸಂಘದ ಕಾರ್ಯಕ್ರಮ ಅದರಲ್ಲಿ ಚೆನ್ನಾಗಿ ಮೂಡಿಬರುತ್ತಿದೆ ಮತ್ತು ಇನ್ನಷ್ಟು ಸಮಾಜ ಬಾಂಧವರನ್ನು ತಲುಪುವಂತಾಗಲಿ ಎಂದು ಹಾರೈಸಿದರು.

ಸಂಘದ ಕಾರ್ಯದರ್ಶಿ ಬಿ.ಕೃಷ್ಣಮೂರ್ತಿ ರಾವ್ ಧನ್ಯವಾದವನ್ನಿತ್ತರು. ಕಾರ್ಯಕ್ರಮವನ್ನು ಯು.ಅರವಿಂದ ಕುಮಾರ್ ನಿರ್ವಹಿಸಿದರು. ಆ ದಿನ ಶ್ರೀಶಾರದೆಗೆ ಹೂವಿನ ಪೂಜೆ ಹಾಗೂ ಆಗಮಿಸಿದವರೆಲ್ಲರಿಗೂ ಭೋಜನದ ವ್ಯವಸ್ಥೆಯ ಪ್ರಾಯೋಜಕತ್ವವನ್ನು ಮಟ್ಟು ಕೃಷ್ಣಕುಮಾರ್ ನೀಡಿದ್ದರು.

## ಕುಂಜಿಬೆಟ್ಟು ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ : ಮಹಾಸಭೆ

(....1ನೇ ಪುಟದಿಂದ)

ಸಭೆಯಲ್ಲಿ ವ್ಯಕ್ತವಾದ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ನೀಡಲಾಯಿತು. ಹಾಗೆಯೇ 2010-11 ವರ್ಷಕ್ಕೆ ಲೆಕ್ಕಪರಿಶೋಧಕರಾಗಿ ಶ್ರೀ ಕೆ. ಗಣೇಶ ಹೆಬ್ಬಾರ್, ಹೆಬ್ಬಾರ್ ಎಸೋಸಿಯೇಟ್ಸ್ ಇವರನ್ನು ಸರ್ವಾನುಮತದಿಂದ ನೇಮಿಸಲಾಯಿತು. ಸಭೆಯಲ್ಲಿ ಭಾಗವಹಿಸಿದ್ದ ಸಂಘದ ಸದಸ್ಯರೂ, ಮುಂಬಯಿ ಸಂಘದ ಸದಸ್ಯರೂ ಆದ ಡಾ। ಪಿ.ಜಿ.ರಾವ್ ಮತ್ತು ಬೈಲೂರು ಬಾಲಚಂದ್ರ ರಾವ್‌ರವರು ಸಂಘದ ಅಭಿವೃದ್ಧಿಯನ್ನು ಕಂಡು ಹರ್ಷ ವ್ಯಕ್ತಪಡಿಸಿ ಶುಭ ಹಾರೈಸಿದರು. ಕೊನೆಯಲ್ಲಿ ಸಂಘದ ಜತೆ ಕಾರ್ಯದರ್ಶಿ ಶ್ರೀ ಅರವಿಂದ ಕುಮಾರ್ ಧನ್ಯವಾದವನ್ನು ನೀಡಿದರು.


**ಶ್ರೀಶಾರದಾ**

**ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ ನಿ.,**

**ಭೂವರಾಹ ಕಾಂಪ್ಲೆಕ್ಸ್, ಉಡುಪಿ - 576 101.**

**ಸೊಸೈಟಿಯ 2011ನೇ ಇಸವಿಯ ಕ್ಯಾಲೆಂಡರ್ ಮುದ್ರಿತಗೊಂಡಿದ್ದು ಎಲ್ಲಾ ಸದಸ್ಯರು ತಮ್ಮ ಪ್ರತಿಗಳನ್ನು ಸೊಸೈಟಿಯ ಭೂವರಾಹ ಕಾಂಪ್ಲೆಕ್ಸ್ ಕಛೇರಿಯಿಂದ ಪಡೆದುಕೊಳ್ಳಲು ಕೋರಲಾಗಿದೆ.**

**-ಆಡಳಿತ ಮಂಡಳಿ**


### ಸಂಕ್ರಾಂತಿ ಶುಭಾಶಯಗಳು

ಎಲ್ಲ ಸಮಾಜ ಬಾಂಧವರಿಗೆ, ಶ್ರೀಶಾರದಾ ಪತ್ರಿಕೆಯ ಅಭಿಮಾನಿಗಳಿಗೆ, ಲೇಖಕರಿಗೆ ಹಾಗೂ ಪತ್ರಿಕೆಯಲ್ಲಿ ಜಾಹೀರಾತನ್ನು ನೀಡಿ ಸಹಕರಿಸಿದ ಎಲ್ಲರಿಗೂ ಮಕರ ಸಂಕ್ರಾಂತಿಯ ಶುಭಾಶಯಗಳು.

**-ಸಂಪಾದಕ ಮಂಡಳಿ.**

## ವಿಳಾಸ ಬದಲಾವಣೆ

**SRI SUHAS RAO**
421, IVth Floor,
Saptagiri Enclave, Kalakuteer Road,
Near Chikkalasandra Bus Stop,
Padmanabhanagar, Bangalore

**SRI I.RAJAGOPAL RAO**
C/o Sri Vishwanath Bhat
104, Chitpady Bail,
Chitpady, Kasturbanagar, Udupi.

**SRI A. B. RAO**
13, "Premodayam", 4th Floor, Flat
No.295/296, Corner of 9th & 12th
Road, Thane West, Mumbai - 400052.

**S. JAYALAXMI RAO**
**SATHYAVIJAYA RAO**
Laxmi Nivas, E3 II Floor
Gowri Nilaya Building,
Vadiraja Cross Road, Udupi.

**SRI JAYANTHA RAO**
"Ekadantha", 49, 5th A Cross,
Tunganagar, Syndicate Bank Colony,
Vishwaneedam, Bangalore.

**SMT. SHRIMATHI**
C/o Sri Satyashankar Rao
"Sannidi", Kakabettu,
Kulshekar, Mangalore.



Krishna Rao

Ph :2520652
Mob. :9902029048



**KISHAN**

Studio & Video



Indoor Photography & Port Folio Photography,
Video & Mixing, Lamination

MAIN ROAD, MAJOOR & BANTAKAL.


## ಕುಂಜಿಬೆಟ್ಟು ಶ್ರೀಶಾರದಾ ದೇವಸ್ಥಾನದಲ್ಲಿ ಸಾಮೂಹಿಕ ಚಂಡಿಕಾಯಾಗ

(....1ನೇ ಪುಟದಿಂದ)

ಹಾಗೂ ಉಡುಪಿ ಕುಂಜಿಬೆಟ್ಟು ಶಾರದಾ ದೇವಸ್ಥಾನದಲ್ಲಿ ಸಂಘದಿಂದ ನಡೆಸಲಾಗುವ ಸ್ವಾಧ್ಯಾಯ ಮಂಡಳಿಯವರಿಂದ ದುರ್ಗಾಸಪ್ತಶತಿ ಪಾರಾಯಣ ನೆರವೇರಿತು. ಮಹಿಳೆಯರು ಲಲಿತಾ ಸಹಸ್ರನಾಮ ಪಠಣ, ಶ್ರೀದೇವಿಯ ಭಜನೆ ನಡೆಸಿದರು. ಯಾಗ ಕರ್ತೃಗಳಾಗಿ ಶ್ರೀ ಮ.ನಾ.ಹೆಬ್ಬಾರ್ ದಂಪತಿಗಳು ಭಾಗವಹಿಸಿದ್ದರು. ಸುಮಾರು 400ಕ್ಕೂ ಮಿಕ್ಕಿ ಭಕ್ತ ಜನರು ಚಂಡಿಕಾಯಾಗ ದಲ್ಲಿ ಪಾಲ್ಗೊಂಡು ಭೋಜನ ಪ್ರಸಾದ ಸ್ವೀಕರಿಸಿದರು.

ಈ ಸಲ ಪ್ರಸಾದದೊಂದಿಗೆ ಶ್ರೀ ಶಂಕರಾಚಾರ್ಯರ ಫೋಟೋ ಎಲ್ಲರ ಮನೆ ತಲುಪುವಂತಾಯಿತು. ಶ್ರೀಶಂಕರಾಚಾರ್ಯರ ಭಾವಚಿತ್ರ ಕ್ಲಪ್ತ ಸಮಯದಲ್ಲಿ ತಲುಪಿಸಲು ನೆರವಾದ ಶ್ರೀ ದೇವಾನಂದ ಭಟ್‌ರಿಗೆ ಸಂಘದ ಕಾರ್ಯದರ್ಶಿಯವರು ಕೃತಜ್ಞತೆಯನ್ನು ಸಲ್ಲಿಸಿದರು. ಯಾಗ ಕರ್ತೃಗಳಾಗಿ ಭಾಗವಹಿಸಿದ ಶ್ರೀ ಮ.ನಾ. ಹೆಬ್ಬಾರ್ ದಂಪತಿಗಳಿಗೆ, ಚಂಡಿಕಾಯಾಗ ನಡೆಸಲು ತಗಡಿನ ಚಪ್ಪರ, ಶಾಮಿಯಾನ ಉಚಿತವಾಗಿ ನೀಡಿದ ಹಾಗೂ ಭೋಜನ ವ್ಯವಸ್ಥೆಯನ್ನು ಮಾಡಿದ ಶ್ರೀ ಮಂಜುನಾಥ ಹೆಬ್ಬಾರ್‌ರವರಿಗೆ, ಸಾಮೂಹಿಕ ಚಂಡಿಕಾಯಾಗದಲ್ಲಿ ಭಾಗವಹಿಸಿದ ಎಲ್ಲಾ ಭಕ್ತ ಬಾಂಧವರಿಗೆ, ಯಾಗವನ್ನು ವಿಧಿ ಪ್ರಕಾರ ನೆರವೇರಿಸಿದ ವೇ.ಮೂ.ಶ್ರೀ ವಾಗೀಶ ಶಾಸ್ತ್ರಿ ಹಾಗೂ ಅವರ ಬಳಗದವರಿಗೆ, ಸಂಘದ ಮಹಿಳಾ ವೇದಿಕೆ, ಯುವವೇದಿಕೆ ಹಾಗೂ ಇತರ ವೇದಿಕೆಗಳ ಅಧ್ಯಕ್ಷರು, ಸಂಚಾಲಕರು, ಸದಸ್ಯರುಗಳಿಗೆ ಹೃತ್ಪೂರ್ವಕ ಕೃತಜ್ಞತೆಗಳು.

**ಅನಿಸಿಕೆ**

### ''ಶ್ರೀಶಾರದಾ''

**ದಿನಾಂಕ 14-12-2010ರಂದು ಸಂಜೆ ಜರಗಿದ ಶ್ರೀಶಾರದಾ ಪತ್ರಿಕೆಯ ''ದಶಮಾನೋತ್ಸವ'ದ ವಿಶೇಷ ಸಂಚಿಕೆಯ ಬಿಡುಗಡೆಯ ಸಮಾರಂಭದ ಸಂದರ್ಭದಲ್ಲಿ ಶ್ರೀ ಮನಾಹೆಬ್ಬಾರರು ಬರೆದು ಪ್ರಸ್ತುತಪಡಿಸಿದ 'ಶ್ರೀಶಾರದಾ' ಪತ್ರಿಕೆಯ ಕುರಿತಾದ ವಾರ್ಧಿಕ ಷಟ್ಪದಿಯ ಪದ್ಯಗಳು :-**

ಪೊಡವಿಗೊಡೆಯನ ನೆಲೆಯ, ಉಡುಪಿ ಕ್ಷೇತ್ರದ ಕೆಲದಿ।
ಮೃಡತನಯ ಷಣ್ಮುಖನ ಕಡುಭಕ್ತರಾಗಿರುತ।
ಬಿಡದವನ ನಿತ್ಯದಿಂ ಸಡಗರದಿ ಭಜಿಪ ದ್ರಾವಿಡ ಬ್ರಾಹ್ಮಣರ ಸಂಘದ॥
ಒಡೆತನದ ಪತ್ರಿಕೆಯು ಬಿಡದೆ ದಶ ವರ್ಷದಿಂ।
ನಡೆದಿರುವ ಸಂಭ್ರಮವ ಬಿಡದಾಚರಿಸುತಿರುವ।
ಸಡಗರದ ಹಬ್ಬವಿದು ಕಡುಬಕುತಿಯಲಿ ನೆನೆವೆ ಬಿಡದೆ ಶಾರದೆಯನಿಂದು ॥ ೧ ॥

'ಶ್ರೀಶಾರದಾ' ಎಂಬ ನಾಮದೀ ಪತ್ರಿಕೆಯು।
ಸಾಸಿರದ ಸಂಖ್ಯೆಯಲಿ ಓದುಗರ ಪಡೆದಿಹುದು।
ಭಾಸುರದ ಕತೆ, ಕವನ, ಧಾರ್ಮಿಕದ ಪರಿಚಯದ ಲೇಖನಂಗಳ ಕೊಡುತ॥
ಆಸುಪಾಸಿನ ನಮ್ಮ ಜಾತಿ ಬಾಂಧವರಲ್ಲಿ।
ಮಾಸಮಾಸದಿ ನಡೆವ ಪರಿಣಯವು, ಬ್ರಹ್ಮೋಪ।
ದೇಶಗಳ ವರದಿಯಲ್ಲದೆ ಜನನ-ಮರಣಗಳ ವರದಿಯನು ನೀಡುತಿಹುದು ॥ ೨ ॥

'ಸರುವೋತ್ತಮ'ರ ಯಾಜಮಾನ್ಯದಲಿ ಸಂಘವಿದು।
ಸರುವ ರೀತಿಯ ವುನ್ನತಿಕೆಯನ್ನು ಪಡೆದು ಬಲು।
ತರದಿಂದ ಪತ್ರಿಕೆಯು ಜನಮನ್ನಣೆಯಗಳಿಸಿ ಬಾಳಲಿ ಸಹಸ್ರವರುಷ॥
ಇರದೆ ಸಂತಸದಿಂದಲಾಗಮಿಸಿ ಪತ್ರಿಕೆಯ।
ಹರಸಿರುವ ವಿದ್ವಾಂಸರಹ ಶ್ರೀ ಅನಂತಪುರ।
ವರ ಈಶ್ವರಯ್ಯರನು ವಂದಿಸುತ ಶಾರದೆಯ ನಮಿಸುವೆನು ಭಯಭಕ್ತಿಲಿ ॥ ೩ ॥

''ಶುಭಂ''

-ಮ.ನಾ.ಹೆಬ್ಬಾರ್

# ದೇಶಭಕ್ತಿ

– ಸಾಂತೂರು ಸದಾಶಿವ ರಾವ್, ಎಂ.ಎ.ಬಿ.ಎಡ್.

ವ್ಯಕ್ತಿಯ ಜೀವನ ವ್ಯಾಪಾರಗಳು ದೇಶ ಮತ್ತು ಕಾಲಗಳಿಂದ ಪ್ರಭಾವಿತವಾಗಿರುತ್ತವೆ ಮತ್ತು ನಿಯಂತ್ರಿತವಾಗಿರುತ್ತವೆ. ದೇಶ ಎಂದರೆ ನಾವಿರುವ ಸ್ಥಳ. ಮನೆಯಿಂದ ಆರಂಭವಾಗಿ ನಮ್ಮದು ಎಂಬ ಭಾವ ಇರುವಲ್ಲಿಯವರೆಗೆ ವ್ಯಾಪ್ತವಾಗಿರುತ್ತದೆ. ಇದು ಒಂದು ಪ್ರಜ್ಞೆ. ಈ ಪ್ರಜ್ಞೆ ಉಳ್ಳವನು ಸದಾ ಜಾಗೃತನಾಗಿ ಇರುತ್ತಾನೆ, ಮನಬಂದಂತೆ ವರ್ತಿಸಲಾಗದ ಸ್ವಯಂ ನಿಯಂತ್ರಣ ಹೊಂದಿರುತ್ತಾನೆ. ಒಂದು ಮಾತು ಇಲ್ಲಿ ಪ್ರಸುತ್ತ ''ನಿಜ ದೇಶ ಸ್ವಾಭಿಮಾನ ಶೂನ್ಯರ್‌ನರರೆ? ''ನಿಜ ನಿಜ ನರಪಶುಗಳ್''

ದೇಶದ ವಿಷಯ ಬಂದಾಗ, ನಮ್ಮ ಭಾರತದ ಉದ್ದಗಲಕ್ಕೂ ಅನಾದಿಕಾಲ ದಿಂದಲೂ ಒಂದು ಕರ್ಮದ ಸಂಕಲ್ಪ ಮಾಡುವಾಗ ''ದೇಶ ಕಾಲಂ ಸಂಕೀರ್ತ್ಯ'' ಪ್ರಾರಂಭ ಕಾಲವನ್ನು ಪಂಚಾಂಗ ರೀತಿಯಲ್ಲಿ ಹೇಳಿ ದೇಶವನ್ನು ''ಜಂಬೂದ್ವೀಪೇ ಭರತಖಂಡೇ, ಭಾರತವರ್ಷೇ ಮೇರೋ ದಕ್ಷಿಣ ಪಾರ್ಶ್ವೆ ದಂಡಕಾರಣ್ಯೇ ಎಂದು ಹೇಳಿ, ಪಶ್ಚಿಮ ಕರಾವಳಿಯವರು ಗೋಕರ್ಣ ಮಂಡಲೇ ಗೋರಾಷ್ಟ್ರದೇಶೇ ಪರಶುರಾಮ ಕ್ಷೇತ್ರೇ ಎಂದು ಹೇಳಿ ನಾಮಗೋತ್ರ ಹೇಳುತ್ತಾರೆ. ನಾಮದೊಂದಿಗೆ ಊರಿನ ಹೆಸರು, ವಂಶದ ಹೆಸರು, ಮನೆಯ ನೆನಪೂ ಬರುತ್ತದೆ. ಪರಂಪರೆಯಾಗಿ ಹೇಳುತ್ತಾ ಬಂದಿರುವ ಈ ಸಂಕಲ್ಪದಲ್ಲಿ ಕೆಲವು ಈಗ ನಮ್ಮ ಅನುಭವಕ್ಕೆ ಬರದಿದ್ದರೂ, ಮನೆ, ಗ್ರಾಮ, ಪ್ರದೇಶ ಮತ್ತು ದೇಶದ ಕಲ್ಪನೆ ಸ್ಪಷ್ಟವಾಗಿದೆ. ದೇಶ ಎಂಬಲ್ಲಿ ಇವು ಒಂದಾಗುತ್ತವೆ. ಮನೆಯ ವಿಸ್ತಾರ ದೇಶ. ದೇಶದ ಭಾಗ ಗ್ರಾಮ, ಮನೆ ಇತ್ಯಾದಿಗಳು.

ಆದರೆ ಈಗಿನ ರಾಜಕೀಯ ವಿಭಾಗಗಳು ಒಂದಕ್ಕಿಂತ ಇನ್ನೊಂದು ಬೇರೆಯೋ ಎಂಬ ಹಾಗೆ ಭಾವಿಸುವ ಸ್ವ, ಪರ ಭಾವದಿಂದ ಸಂಘರ್ಷಕ್ಕೆ ಕಾರಣವಾಗುವ ಹೊಸ ಪಿಡುಗಾಗಿ ತೋರಿ ಬರುವುದು, ದೇಶ ಕಲ್ಪನೆಯ ವಿಡಂಬನೆ.

ದೇಶವನ್ನು ಒಂದಾಗಿ ಭಾವಿಸಿದಾಗ ಮೂಡುವುದೇ ದೇಶಭಕ್ತಿ. ಭಕ್ತಿ ಎಂದರೆ ''ಪರಮ ಪ್ರೇಮ ರೂಪಾ''. ಅದು ಹೃದಯದಲ್ಲಿ ಮೂಡುವ ಭಾವ, ಒಂದು ಆಹ್ಲಾದಕರ ಸ್ಪಂದನ. ಶ್ರೇಷ್ಠವಾದುದರ ಬಗೆಗೆ ಭಕ್ತಿ, ಸಮಾನತೆಯಲ್ಲಿ ಪ್ರೀತಿ, ಕಿರಿದಾದುದರ ಬಗ್ಗೆ ವಾತ್ಸಲ್ಯ ಎಂಬ ಪದಗಳಿವೆ. ಆದರೆ ಮೂಲತಃ ಒಂದೇ. ಹೆಚ್ಚಿನ ಭಾಷೆಗಳಲ್ಲಿ ಒಂದೇ ಶಬ್ದದ ಬಳಕೆಯಿದೆ.

ದೇಶಭಕ್ತಿ ಎಂಬುದು ಹೇಗೆ ವ್ಯಕ್ತವಾಗುತ್ತದೆ ಎಂಬಲ್ಲಿ ರಾಮಾಯಣದಲ್ಲಿ ರಾಮನೆಂದಂತೆ ''ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ'', ಕನ್ನಡ ಕವಿವಾಣಿಗಳಲ್ಲಿ ''ನೆನೆವುದೆನ್ನ ಮನಂ ಬನವಾಸಿ ದೇಶಮಂ'', ''ಎಲ್ಲಾದರು ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು'' ಹೀಗೆ ಹಲವಾರು ಮಾತುಗಳು ನಮಗೆ ಈ ಭಾವ ಅಭಿವ್ಯಕ್ತವಾಗುವಂತೆ ಮಾಡುತ್ತವೆ.

ವಿವೇಕಾನಂದರು ಅಮೇರಿಕಾ ಯಾತ್ರೆ ಯಿಂದ ಹಿಂದೆ ಬಂದಾಗ ನೆಲಕ್ಕೆ ನಮಸ್ಕರಿಸಿ, ಮೃತ್ತಿಕೆಯನ್ನು ಶಿರದಲ್ಲಿ ಧರಿಸಿ, ನಿಜವಾದ ಜ್ಞಾನಿಯಾದರೂ, ಸ್ವಪರ ಬೇಧವಿಲ್ಲದವ ರಾದರೂ ದೇಶಭಕ್ತಿಯನ್ನು ಬಿಡಲಿಲ್ಲ ಎಂಬುದನ್ನು ಕೇಳುವಾಗ ನಮಗೆ ರೋಮಾಂಚನವಾಗುತ್ತದೆ.

ಭಕ್ತಿಯು ಕ್ರಿಯಾತ್ಮಕವಾಗಿ ಕಾಣಬೇಕು. ನಮ್ಮ ದೇಶದ ಹಿರಿಮೆ, ಗರಿಮೆಗಳ ಬಗ್ಗೆ ಹೆಮ್ಮೆ, ಅದನ್ನು ಉಳಿಸಿಕೊಳ್ಳಬೇಕು, ಬೆಳೆಸಬೇಕೆಂಬ ಸಾತ್ವಿಕ ಅಭಿಮಾನ ಪ್ರೇರಿತ ಪ್ರಯತ್ನಬೇಕು. ಇಲ್ಲಿ ಇರುವ ನ್ಯೂನತೆ ದುಃಸ್ಥಿತಿಗಳ ಬಗ್ಗೆ ದುಃಖ ಮತ್ತು ಅವನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಎಲ್ಲಾ ತ್ಯಾಗಕ್ಕೂ ಸಿದ್ಧನಾಗಬೇಕೆಂಬ ಛಲ, ಯಥಾ ಸಾಧ್ಯಕ್ರಿಯಾಯೋಜನೆ ಇತ್ಯಾದಿ ರೂಪಗಳಲ್ಲಿ ಪ್ರಕಟವಾಗಬೇಕು. ಪ್ರತಿ ಯೊಬ್ಬನಿಗೂ ತಾನು ದೇಶದ ಗೌರವವನ್ನು ಹೆಚ್ಚಿಸಬಲ್ಲೆ ಎಂಬ ವಿಶ್ವಾಸಬೇಕು. ದೇಶವನ್ನು ಬೆಳಗಿಸಿದ, ಬೆಳೆಸಿದವರ ಆದರ್ಶವನ್ನು ಎದುರಿಗಿಟ್ಟುಕೊಂಡು ಆ ಮಾರ್ಗದಲ್ಲಿ ನಡೆಯುವ ಪ್ರಾಮಾಣಿಕ ಪ್ರಯತ್ನಬೇಕು. ಇಲ್ಲಿ ಪ್ರಸಿದ್ಧಿ ಮುಖ್ಯವಲ್ಲ. ಪ್ರಸಿದ್ಧರಿಗಿಂತಲೂ ಹೆಚ್ಚಿನ ದೇಶಭಕ್ತರು ಸದಾಕಾಲದಲ್ಲೂ ಇದ್ದರು, ಇದ್ದಾರೆ. ಅವರಿಗೆ ತೃಪ್ತಿ ಪ್ರಧಾನ.

ಹಿಂದಿನ ಕಾಲದಿಂದಲೂ ತೀರ್ಥಯಾತ್ರೆ ಎಂಬ ಬಹುಮುಖಿ, ಧಾರ್ಮಿಕ ಆಚರಣೆ ಭಾರತವನ್ನು ಒಂದಾಗಿಸಿತ್ತು. ಯಾತ್ರೆಗೆ ಹೋಗದವನೂ, ಹೋದವರಿಂದ ತಿಳಿದು ದೇಶಭಕ್ತನಾಗುತ್ತಿದ್ದ. ಈಗ ಯಾತ್ರೆಯ ಕಲ್ಪನೆ ಬದಲಾಗಿದ್ದರೂ ಫಲ ಇದೆ.

ಭಕ್ತಿಯೊಂದಿಗೆ ಭಯ ಬರುತ್ತದೆ. ಇಲ್ಲಿ ಭಯ ಎಂದರೆ ಜಾಗ್ರತೆ. ದೇಶದ ಗೌರವ ನಮ್ಮಿಂದ ಕೆಡುತ್ತದೋ ಎಂಬ ಭಯ ಬೇಕು. ಜಪಾನು ಮೊದಲಾದ ದೇಶಗಳಲ್ಲಿ ತಮ್ಮ ದೇಶದ ಹೆಸರು ಹಾಳಾಗಬಾರದು ಎಂಬ ಪ್ರಜ್ಞೆ ಬಲವಾಗಿರುವುದನ್ನು ನಾವು ನೋಡಿ ಕಲಿಯಬಹುದು. ನಮ್ಮ ಆಚಾರ, ವಿಚಾರಗಳ ಬಗ್ಗೆ ಸದಾ ಜಾಗೃತೆ ಬೇಕು. ''ಲೋಕಾಪವಾದಾದ್ಭಯಂ'' ಅಗತ್ಯ.

ಈ ರೀತಿಯ ಚಿಂತನೆಗಳು ಬೆಳೆದು, ಜನ ಜಾಗೃತರಾದರೆ ನಮ್ಮ ಕೀಳರಿಮೆ ತೊಲಗಿ ಹಿಂದಿನಂತೆ ನಮ್ಮ ದೇಶ ಪುಣ್ಯಭೂಮಿಯಾಗಿ, ಉಳಿದವರಿಗೆ ಗುರುಸ್ಥಾನಕ್ಕೆ ಏರಿ, ನಾವು ಇಲ್ಲಿ ಹುಟ್ಟಿ ಧನ್ಯರು, ನಮ್ಮ ಬದುಕು ಸಾರ್ಥಕ ಎಂಬ ತೃಪ್ತಿ ಲಭ್ಯವಾಗುತ್ತದೆ.

ಇದಕ್ಕೆ ಬೇಕಾದ ದಾರಿ, ಮಾರ್ಗದರ್ಶನ, ನಮ್ಮ ಹಿರಿಯರಿಂದ ಬಳುವಳಿಯಾಗಿ ಬಂದಿದೆ. ಹಿಂದಿನದನ್ನು ಊರ್ಜಿತಗೊಳಿಸಿ ಕಾಲ ಧರ್ಮಕ್ಕೆ ಹೊಂದಿಕೊಳ್ಳುವಂತೆ ಮಾಡಿದರೆ ನಾವು ಎಲ್ಲರಿಗಿಂತಲೂ ಎಲ್ಲಾ ಕ್ಷೇತ್ರಗಳಲ್ಲೂ ಮುಂದಾಗುವುದಕ್ಕೆ ಸಂದೇಹವಿಲ್ಲ.

ಇದಕ್ಕೆ ಬೇಕಾದ ಇಚ್ಛಾಶಕ್ತಿ ನಾವು ಬೆಳೆಸಿಕೊಂಡರೆ, ಕ್ರಿಯಾಶಕ್ತಿ ರೂಪಿಸಿಕೊಂಡರೆ ನಮ್ಮ ಮುಂದಿನ ಪೀಳಿಗೆ ಕೀಳರಿಮೆರಹಿತರಾಗಿ ನಿಜದೇಶ ಸ್ವಾಭಿಮಾನ ಸಹಿತ ಚೆನ್ನಾಗಿ ಬಾಳಬಹುದು. ಇದಕ್ಕಾಗಿ ನಾವೆಲ್ಲರೂ ಕಟಿಬದ್ಧರಾಗಿ ದೇಶಮಾತೆಗೆ ಸೇವೆ ಸಲ್ಲಿಸೋಣ.

|| ಶುಭಮಸ್ತು ||

ವ್ಯಕ್ತಿ ಪರಿಚಯ

# ಶ್ರೀ ಕೆ.ಬಿ.ರಾವ್



ಶ್ರೀ ಕೆ.ಬಿ.ರಾವ್ ಅವರು ಕಾರ್ಕಳ ತಾಲೂಕಿನ ನಿಟ್ಟೆ ಗ್ರಾಮದ ಕೆಮ್ಮಣ್ಣಿನವರಾಗಿದ್ದು, ಶ್ರೀಯುತರು ದಿವಂಗತ ಕೆಮ್ಮಣ್ಣು ವೆಂಕಟರಾವ್ ಅವರ ಪುತ್ರ. ಸುರತ್ಕಲ್‌ನ ಪ್ರತಿಷ್ಠಿತ ಕರ್ನಾಟಕ ರೀಜನಲ್ ಇಂಜಿನಿಯರಿಂಗ್ ಕಾಲೇಜಿನ (ಪ್ರಸ್ತುತ ಎನ್.ಐ.ಟಿ.ಕೆ.) ಇಲೆಕ್ಟ್ರಿಕಲ್ ಇಂಜಿನಿಯರಿಂಗ್, ಬಿ.ಟೆಕ್‌ನಲ್ಲಿ 5ನೇ ರ್‍ಯಾಂಕ್, ಚಿನ್ನದ ಮೆಡಲ್ ಪಡೆದ ಶ್ರೀ ಕೆ.ಬಿ.ರಾವ್ ಅವರು ಚಿಕಾಗೋ ವಿಶ್ವವಿದ್ಯಾನಿಲಯದಿಂದ 2000ನೇ ವರ್ಷದಲ್ಲಿ 'ಸ್ಟ್ರೇಟೆಜಿಕ್ ಮಾರ್ಕೆಟಿಂಗ್ ಮತ್ತು ಸೇಲ್ಸ್ ಮ್ಯಾನೇಜ್‌ಮೆಂಟ್‌ನಲ್ಲಿ ಸ್ನಾತಕೋತ್ತರ ಮ್ಯಾನೇಜ್‌ಮೆಂಟ್ ಪದವಿಯನ್ನು ಪಡೆದಿದ್ದರು. ಹಾಗೆಯೇ ಸಿಐಎ ಕೋರ್ಸನ್ನು ಯಶಸ್ವಿಯಾಗಿ ಪೂರೈಸಿ ಐ.ಎಸ್.ಬಿ. ಸರ್ಟಿಫಿಕೇಶನ್‌ಗೆ ಸಂಬಂಧಿಸಿ ಕ್ವಾಲಿಫೈಡ್ ಲೀಡ್ ಏಸೆಸರ್ ಆಗಿಯೂ ಪರಿಣತಿ ಹೊಂದಿದ್ದಾರೆ.

**ವೃತ್ತಿಪರ ಹಿನ್ನೆಲೆ :** ಪ್ರಸ್ತುತ ಶ್ರೀ ಕೆ.ಬಿ.ರಾವ್ ಅವರು ಮೆ। ಫಿನೋಲೆಕ್ಸ್ ಕೇಬಲ್ಸ್ ನಿಯಮಿತದಲ್ಲಿ ಹಿರಿಯ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಕಂಪೆನಿಯು ಪೂನಾದಲ್ಲಿದ್ದು ಸದ್ರಿ ಕಂಪೆನಿಯ 2 ಬಸ್ ಓಪ್ಟಿಕ್ ಫೈಬರ್ ಕೇಬಲ್ಸ್ ಮತ್ತು ಕಾಪರ್ ರಾಡ್ ಬಿಸಿನೆಸ್ ನಿರ್ಮಾಣದ ಸಂಪೂರ್ಣ ಜವಾಬ್ದಾರಿಯನ್ನು ಶ್ರೀ ಕೆ.ಬಿ.ರಾವ್ ಅವರು ವಹಿಸಿದ್ದು ಕ್ಲಪ್ತ ಅವಧಿಯಲ್ಲಿ ಅದು ಪರಿಪೂರ್ಣಗೊಂಡಿದೆ. ಹಾಗೆಯೇ ಅವರು ವೆರ್ನಾದಲ್ಲಿ ಸ್ಥಾಪಿಸಿದ ಇನ್ನೊಂದು ಘಟಕದ ಸಂಪೂರ್ಣ ಜವಾಬ್ದಾರಿಯನ್ನೂ ವಹಿಸಿದ್ದರು. ಶ್ರೀಯುತ ರಾವ್ ಅವರಿಗೆ ಕಳೆದ 25 ವರುಷಗಳಿಂದ ಪವರ್ ಜನರೇಶನ್, ಟ್ರಾನ್ಸ್‌ಮಿಶನ್ ಮತ್ತು ಡಿಸ್ಟ್ರಿಬ್ಯೂಶನ್, ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಮತ್ತು ಒಪರೇಶನ್– ಹೀಗೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ ಅನುಭವವಿದ್ದು ಕಂಪನಿಯ ಸಮಗ್ರ ಅಭಿವೃದ್ಧಿಯಲ್ಲಿ ವಿಶೇಷ ಪರಿಣತಿ ಇವರ ಪಾಲಿನದ್ದಾಗಿದೆ ಎಂದರೆ ಅತಿಶಯೋಕ್ತಿಯಿಲ್ಲ. ಹಾಗೆಯೇ ಶ್ರೀಯುತರು ಖಾಸಗಿ ವಲಯ, ಸಾರ್ವಜನಿಕ ವಲಯ ಮತ್ತು ಬಹುರಾಷ್ಟ್ರೀಯ ಕಂಪನಿಗಳಲ್ಲೂ ಸಾಕಷ್ಟು ಮಾಹಿತಿ–ಪರಿಣತಿಗಳನ್ನು ಪಡೆದುಕೊಂಡಿದ್ದಾರೆ. ಈ ಹಿಂದೆ ಬಿಎಸ್‌ಇಎಸ್ (ಆರ್‌ಇಎಲ್), ಎನ್‌ಜಿಇಎಫ್ ಮತ್ತು ಎಬಿಬಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ.

ಶ್ರೀ ಕೆ.ಬಿ.ರಾವ್ ಅವರು '3–ಎಸ್ ಮ್ಯಾನೇಜ್‌ಮೆಂಟ್' ಸಿದ್ಧಾಂತದಲ್ಲಿ ಅಪಾರ ನಂಬಿಕೆಯುಳ್ಳವರಾಗಿದ್ದು ಈ ಸಿದ್ಧಾಂತದ ಪ್ರಾಯೋಗಿಕ ಪ್ರಯೋಜನಗಳನ್ನು ಫಿನೋಲೆಕ್ಸ್ ಮ್ಯಾನೇಜ್ ಮೆಂಟ್‌ನಲ್ಲೂ ಸಾಕಷ್ಟು ಅಳವಡಿಸಿದ್ದಾರೆ. ಈ ಸಿದ್ಧಾಂತದ ಅಳವಡಿಸುವಿಕೆಯಿಂದ ಫಿನೋಲೆಕ್ಸ್ ಕಂಪನಿ ಸಾಕಷ್ಟು ಪ್ರಯೋಜನಗಳನ್ನು ಈಗಾಗಲೇ ಯಶಸ್ವಿಯಾಗಿ ಪಡೆದು ಕೊಂಡಿದೆ. ಅವುಗಳಲ್ಲಿ ಪ್ರಮುಖವಾಗಿ–


* ಫಿನೋಲೆಕ್ಸ್ ಉತ್ಪಾದನೆ 30 ಪ್ರತಿಶತದಷ್ಟು ವೃದ್ಧಿಯಾಗಿದೆ.
* ಅನಾವಶ್ಯಕ ತ್ಯಾಜ್ಯ ಕುಂಠಿತಗೊಂಡಿದೆ, ಅದು 40 ಪ್ರತಿಶತದಷ್ಟಾಗಿದೆ.
* ತರಬೇತಿಗೆ ಸಾಕಷ್ಟು ಮಹತ್ವವನ್ನು ನೀಡಲಾಗಿದೆ.
* 60ರಿಂದ 80 ಲಕ್ಷ ರೂಪಾಯಿಗಳ ಉಳಿತಾಯಗೊಂಡು Cost Management ಪ್ರಕ್ರಿಯೆ ಇವೆಲ್ಲವುಗಳನ್ನೂ ಯಶಸ್ವಿಯಾಗಿ ನಿಭಾಯಿಸಿದೆ.

ಹಾಗೆಯೇ ಶ್ರೀಯುತ ಕೆ.ಬಿ.ರಾವ್ ಅವರು ಗೋವಾದ ಜಿ.ಎಮ್.ಎ ಎಕ್ಸಿಕ್ಯೂಟಿವ್ ಸಮಿತಿಯ ಸದಸ್ಯರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ದೇಶದ ನಾನಾ ಭಾಗಗಳಿಗೆ ಕಂಪನಿಯ ಉತ್ಪನ್ನಗಳ ಮಾರುಕಟ್ಟೆಗೆ ಸಂಬಂಧಿಸಿದ ಪ್ರಯಾಣ ಬೆಳೆಸಿದ ಶ್ರೀಯುತರು ಉದ್ದಿಮೆಯ ಸಮಗ್ರ ಅಭಿವೃದ್ಧಿಯಲ್ಲಿ ತನ್ನನ್ನು ತಾನು ಸಂಪೂರ್ಣವಾಗಿ ತೊಡಗಿಸಿ ಕೊಂಡಿದ್ದಾರೆ.

ಶ್ರೀಯುತರ ಪ್ರೌಢಿಮೆ, ಅನುಭವ, ಪ್ರತಿಭೆಗಳನ್ನರಿತ ಗೋವಾ ಸರಕಾರ ತನ್ನ ತಾಂತ್ರಿಕ ಶಿಕ್ಷಣ ಮಂಡಳಿಯಲ್ಲಿ ಶ್ರೀಯುತ ಕೆ.ಬಿ.ರಾವ್ ಅವರನ್ನು ಸದಸ್ಯರನ್ನಾಗಿ ನೇಮಕಾತಿಗೊಳಿಸಿದೆ. ಪೂನಾದ ಫಿನೋಲೆಕ್ಸ್ ಕೇಬಲ್ಸ್‌ನ ಮಾರ್ಕೆಟಿಂಗ್ ಮತ್ತು ಸೇಲ್ಸ್, ಬಿಸಿನೆಸ್ ಡೆವಲಪ್‌ಮೆಂಟ್ ಡಿವಿಶನ್‌ನ ಪ್ರಧಾನ ಕಚೇರಿಯಲ್ಲಿ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುವ ಮೊದಲು ಗೋವಾದ ಫಿನೋಲೆಕ್ಸ್ ಕೇಬಲ್ಸ್‌ನಲ್ಲಿ ಒಪರೇಶನ್ಸ್ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ.

ಶ್ರೀಯುತ ಕೆ.ಬಿ.ರಾವ್ ಅವರು ಕೇವಲ ತಂತ್ರಜ್ಞಾನಗಳಲ್ಲದೆ ಮ್ಯಾನೇಜ್‌ಮೆಂಟ್ ಸಂಸ್ಥೆಗಳಲ್ಲಿ ಎಂ.ಬಿ.ಎ. (ಉದ್ಯಮಾಡಳಿತ) ಕೋರ್ಸನ್ನು ಅಧ್ಯಯನ ನಡೆಸುವ ವಿದ್ಯಾರ್ಥಿಗಳಿಗೆ ಹಲವು ವಿಶೇಷ ಉಪನ್ಯಾಸಗಳನ್ನು ನೀಡುತ್ತಿದ್ದಾರೆ. ನಾಸಿಕ್, ನಿಟ್ಟೆ, ಜೈಪುರ್ ಮತ್ತು ಮುಂಬೈನ ಪ್ರತಿಷ್ಠಿತ ಎಂ.ಬಿ.ಎ. ಸಂಸ್ಥೆಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಶ್ರೀಯುತರು ಈಗಾಗಲೇ ಚಿರಪರಿಚಿತರು.


ದೇವಿಕೃಪಾ ಏಜೆನ್ಸೀಸ್, ನಂದಿಕೂರು



ಫೋನ್ : 2556536 (R), 2555466 (0)

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



PRAMOD
AUTOMOBILES
KARANGALPADY, MANGALORE -575 003.

30 Years of Service

Ph : 2493633 (0)
2493633 (H.O.)
2212723 (R)
Mobile : 9448260225

: Wholesale & Retail Dealers in :
2 & 3 WHEELERS SPARES & ACCESSORIES

Prop. :Ln.K. HARSHA KUMAR



Rao's 'ಮಾತೃಛಾಯಾ'ರವರ

ಉಡುಪಿ ವಿಶಿಷ್ಟ ರುಚಿಯುಳ್ಳ


ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪೆಮಿಡಿ ಹಾಗೂ ಮಿಡಿ ಉಪ್ಪಿನಕಾಯಿ
ಹಪ್ಪಳ ಹಾಗೂ ಸೆಂಡಿಗೆಗಳು, ಶುದ ದನದ ತುಪ್ಪ ಹಾಗೂ ಜೇನು ತುಪ್ಪ

–: ಮೊದಲಾದ ನಿತ್ಯೋಪಯೋಗಿ ವಸ್ತುಗಳಿಗೆ ಸಂದರ್ಶಿಸಿರಿ :–

ಭಾರತ್ ಸ್ಟೋರ್ಸ್

ರಥಬೀದಿ, ಉಡುಪಿ – 576 101. ಫೋನ್ : 2522444

# "ಹರಿಕಥೆ" ಅಪೇಕ್ಷಿತವೇ? ಅನಪೇಕ್ಷಿತವೇ?-೯



- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

'ಹರಿ' ಎಂಬ ಪದಕ್ಕೆ ಹಲವಾರು ಅರ್ಥಗಳಿವೆ. ತ್ರಿಮೂರ್ತಿಗಳಲ್ಲಿ ಒಬ್ಬನಾದ, ಸ್ಥಿತಿಕರ್ತನಾದ, ಹತ್ತು ಅವತಾರಗಳನ್ನೆತ್ತಿ ಜನರನ್ನು ಸಲಹಿದ, ಜಗನ್ನಿಯಾಮಕನಾದ 'ಮಹಾವಿಷ್ಣು'ವನ್ನು 'ಹರಿ' ಎನ್ನಲಾಗುತ್ತದೆ. ಇವನ ಭಕ್ತರನ್ನು ಹರಿಭಕ್ತರೆಂತಲೂ, ಇವನಿಗೆ ಸಂಬಂಧಪಟ್ಟ ಕಥೆಗಳನ್ನು 'ಹರಿಕಥೆ'ಯೆಂತಲೂ ಜನರು ಹೇಳುತ್ತಾರೆ. ಆದರೆ ವಾಸ್ತವವಾಗಿ 'ಹರಿ' ಎಂಬ ಪದಕ್ಕೆ ಇತರ ತುಂಬಾ ಅರ್ಥಗಳಿವೆ:- ಇದನ್ನು ನಾಮಪದ ಮತ್ತು ಕ್ರಿಯಾಪದಗಳಾಗಿ ಬಳಸಲಾಗುತ್ತದೆ. ನಾಮಪದವಾಗಿ- 1.ಪ್ರವಾಹ 2.ದಂಡು 3.ಸೈನ್ಯ 4.ರೀತಿ 5.ಬೀದಿ 6.ಅಗ್ನಿ 7.ಚಿನ್ನ 8.ಚಂದ್ರ 9.ಸೂರ್ಯ 10.ಕಿರಣ 11.ಗಾಳಿ (ವಾಯು) 12.ಇಂದ್ರ 13.ವಿಷ್ಣು (ಕೃಷ್ಣ) 14.ಶಿವ 15.ಬ್ರಹ್ಮ 16.ಸಿಂಹ 17.ಕುದುರೆ 18.ಆನೆ 19.ಕಪ್ಪೆ 20.ಗಿಣಿ 21.ಕಪಿ 22.ಹಾವು 23.ನವಿಲು 24.ದಿಕ್ಕು 25.ನೀರು ಇತ್ಯಾದಿ. ಕ್ರಿಯಾಪದವಾಗಿ 1.ಧಾವಿಸು 2.ಪ್ರವಹಿಸು 3.ಮುನ್ನುಗ್ಗು 4.ಕತ್ತರಿಸು 5.ತುಂಡು ಮಾಡು 6.ಮೇಲೆ ಬೀಳು ಇತ್ಯಾದಿ. ಇನ್ನು 'ಹರಿ' ಎಂಬ ಶಬ್ದವನ್ನು ಪ್ರಯೋಗಿಸಿ ಇತರ ಶಬ್ದಗಳನ್ನು ಉತ್ಪತ್ತಿ ಮಾಡಲಾಗುತ್ತದೆ. ಅಲ್ಲಿ 'ಹರಿ' ಎಂಬ ಪದವು ವಿಶಿಷ್ಟ ಅರ್ಥದಲ್ಲಿ ಉಪಯೋಗಿಸಲ್ಪಡುತ್ತದೆ. ಉದಾ:-1.ಹರಿಚಂದನ-ಒಂದು ಬಗೆಯ ಗಂಧ 2.ಹರಿವಾಸರ-ಹರಿದಿನ 3.ಹರಿಹಾಯು-ರೇಗು 4.ಹರಿಪದ-ವೈಕುಂಠ; ಮೋಕ್ಷ 5.ಹರಿದಿನ-ಏಕಾದಶಿ 6.ಹರಿಕಾರ-ತಿರುಗಾಡುವ ವ್ಯಾಪಾರಿ 7.ಹರಿಕಂಡಿ-ನೀರು ಹರಿಯಲು ಮಾಡಿರುವ ಕಿಂಡಿ 8.ಹರಿನೀಲ-ಒಂದು ಬಗೆಯ ರತ್ನ 9.ಹರಿಬಲ-ರಾವುತರ ಸೈನ್ಯ (ಅಶ್ವಬಲ) 10.ಹರಿಪೀಠ-ಸಿಂಹಾಸನ 11.ಹರಿಮೇಖಲೆ-ರತ್ನದ ಡಾಬು ಇತ್ಯಾದಿ ಇವಿಷ್ಟೂ ಅಲ್ಲದೆ ಇನ್ನೂ ಎಷ್ಟೋ ಪದಗಳನ್ನು ಪಟ್ಟಿ ಮಾಡಬಹುದಾಗುತ್ತದೆ. ಗ್ರಾಮೀಣ ಭಾಷೆಯಲ್ಲಿ 'ಹರಿ' ಎಂಬ ಪದವನ್ನು 'ಗುಡಾಣ' ಎಂಬರ್ಥದಲ್ಲೂ ಉಪಯೋಗಿಸಲಾಗುತ್ತಿದೆ. ಇದರ ಬಳಕೆಯಿಂದಾಗಿ 'ಹರಿಕಥೆ'ಯಲ್ಲಿ ಒಂದು ಹಾಸ್ಯಪೂರಿತವಾತ 'ಉಪಕಥೆ'ಯೂ ಇದೆ-

ಒಬ್ಬ ಕಳ್ಳನು ಹಳ್ಳಿಯಲ್ಲಿ ಒಬ್ಬರ ಮನೆಯ ಬಚ್ಚಲ ಮನೆಯಿಂದ ಒಂದು ತಾಮ್ರದ ಹಂಡೆ (ಗುಡಾಣ)ಯನ್ನು ಕದ್ದು ಪೇಟೆಯ ಕಡೆಗೆ ಮಾರುವುದಕ್ಕಾಗಿ ಸಾಗುತ್ತಿದ್ದನಂತೆ. ಆಗ ಮಾರ್ಗದ ಬದಿಯಲ್ಲಿಯೇ ಇದ್ದ ಒಂದು ಗುಡಿಯಲ್ಲಿ ಯಾರೋ 'ಕೀರ್ತನಕಾರ' (ಹರಿದಾಸ)ರೊಬ್ಬರಿಂದ ಹರಿಕಥೆ ನಡೆಯುತ್ತಿತ್ತು. ಸಮೀಪದಲ್ಲೇ ಇದ್ದ ಪೊದೆಯೊಂದರ ಎಡೆಯಲ್ಲಿ ತಾನು ಹೊತ್ತು ತಂದಿದ್ದ ಗುಡಾಣವನ್ನು ಬಚ್ಚಿಟ್ಟು ಆ ಕಳ್ಳನು ಹರಿಕಥೆಯನ್ನು ಕೇಳುವ ಉದ್ದೇಶದಿಂದ ಗುಡಿಯ ಒಳಗೆ ಹೋಗಿ ಒಂದು ಮೂಲೆಯಲ್ಲಿ ಕುಳಿತನು. ಆಗ ಕೀರ್ತನಕಾರರು ತನ್ಮಯತೆಯಿಂದ 'ಕಂಡೇ ಹರಿಯ ಕಂಡೇ...' ಎಂಬ ಹಾಡನ್ನು ಹಾಡುತ್ತಿದ್ದರು. ಇದನ್ನು ಕೇಳಿದ ಕಳ್ಳನು ತಾನು ಹರಿ(ಹಂಡೆ)ಯನ್ನು ಕದ್ದಿರುವ ವಿಚಾರ ಹರಿದಾಸರಿಗೆ ಹೇಗೆ ತಿಳಿಯಿತು? ಅವರು ಅದನ್ನು ಕಂಡ ಬಗೆ ಹೇಗೆ? ಎಂದು ಹೆದರಿದ ಕಳ್ಳನು ತಾನು ಕದ್ದ ಗುಡಾಣವನ್ನು ಅಲ್ಲೇ ಬಿಟ್ಟು ಮುಂದಕ್ಕೆ ಪರಾರಿಯಾದನು. ಈ ಕಥೆಯನ್ನು ಹರಿಕಥೆಯಲ್ಲಿ ಉಪಕಥೆಯಾಗಿ ಬಳಸಬಹುದಾಗಿದೆ. ಹರಿದಾಸನು ಹೇಳುತ್ತಿರುವ ಕಥೆಯು ಹರಿ, ಹರ, ಬ್ರಹ್ಮ ಅಥವಾ ಇತರ ಯಾವುದೇ ದೇವರ ಅಥವಾ ಚಾರಿತ್ರಿಕ ಘಟನೆಗಳ ಕುರಿತೋ, ಸಾಮಾಜಿಕ ವಿಷಯಗಳನ್ನು ಕುರಿತೋ ಆಗಿರಬಹುದು. ಆದರೆ ಇವುಗಳೆಲ್ಲವನ್ನೂ 'ಹರಿಕಥೆ' ಎಂಬ ಒಂದೇ ಹೆಸರಿನಿಂದ ಕರೆಯಲಾಗುತ್ತದೆ. ಕಾರಣ, ಕನಕದಾಸ, ಪುರಂದರದಾಸ, ಜಗನ್ನಾಥದಾಸ ಮೊದಲಾದವರು ಹರಿಭಕ್ತರಾಗಿದ್ದು ಅವರಿಂದ ಆರಂಭಿಸಲ್ಪಟ್ಟ ಪ್ರಕಾರ ವಿದಾದುದರಿಂದ ಇದನ್ನು 'ಹರಿಕಥೆ' ಎಂದೇ ಹೇಳಲಾಗುತ್ತದೆ.

# ಮಥುರಾ-ಬೃಂದಾವನ : ಅಖಿಲ ಭಾರತ ಹಿರಿಯ ನಾಗರಿಕರ ಮಹಾಸಮ್ಮೇಳನ

ಉಡುಪಿ ಹಿರಿಯ ನಾಗರಿಕರ ಸಂಸ್ಥೆಯ ಪ್ರತಿನಿಧಿಗಳಾಗಿ, ಕಾರ್ಯದರ್ಶಿ ಶ್ರೀ ಸಿ.ಎಸ್. ರಾವ್ ಇವರು ಮಥುರಾ ಬೃಂದಾವನದಲ್ಲಿ ಇತ್ತೀಚೆಗೆ ನಡೆದ ಹಿರಿಯ ನಾಗರಿಕರ ಮಹಾಸಮ್ಮೇಳನದಲ್ಲಿ ಭಾಗವಹಿಸಿ, ತಮ್ಮ ಅನುಭವಗಳನ್ನು ತಿಳಿಸಿದರು.

ಸಮ್ಮೇಳನವನ್ನು ಉತ್ತರಪ್ರದೇಶದ ಗವರ್ನರ್ ಉದ್ಘಾಟಿಸಿದರು. ಅಕ್ಟೋಬರ್ 23ರಂದು ಸಮ್ಮೇಳನದ ಮುಖ್ಯ ಅತಿಥಿಯಾಗಿ ಬಂದ ಹರಿಯಾಣದ ಮುಖ್ಯಮಂತ್ರಿ, ಹಿರಿಯ ನಾಗರಿಕರಿಗಾಗಿ ಎಲ್ಲಾ ಸಹಕಾರ ಸಹಾಯ ನೀಡುವುದಾಗಿ ಘೋಷಿಸಿ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಜ್ಯೇಷ್ಠ ನಾಗರಿಕರ ಕೇಂದ್ರಗಳನ್ನು ಸ್ಥಾಪಿಸುವ ಭರವಸೆ ನೀಡಿದರು.

ಹಿರಿಯ ನಾಗರಿಕರ ಸಂಸ್ಥೆಗೆ ರೂಪಾಯಿ 10 ಲಕ್ಷದ ಅನುದಾನದ ಬಿಡುಗಡೆಯನ್ನು ಘೋಷಿಸಿದರು. ಹಿರಿಯ ಮಹಿಳಾ ನಾಗರಿಕರ ಕಷ್ಟಪರಂಪರೆಗಳು ಇತ್ಯಾದಿ ವಿಷಯಗಳ ಬಗ್ಗೆ ದೀರ್ಘ ಚರ್ಚೆ ನಡೆಯಿತು. ಸಂಜೆ ನಡೆದ ದೂರದರ್ಶನ ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರು ಕಾರ್ಯದರ್ಶಿಯರು ಭಾಗವಹಿಸಿದ್ದರು. ಈ ಹಿರಿಯ ನಾಗರಿಕರ ಸಂವಾದ ಕಾರ್ಯಕ್ರಮ 16 ಚಾನೆಲ್‌ಗಳಲ್ಲಿ ಪ್ರಸಾರಗೊಂಡಿತು. ಆಮೇಲೆ 'ಕೃಷ್ಣರಾಧೆ' ಎಂಬ ಸಾಂಸ್ಕೃತಿಕ ಕಾರ್ಯಕ್ರಮ ಬಿತ್ತರಗೊಂಡು ಭೋಜನದೊಂದಿಗೆ ಸಮಾಪ್ತವಾಯಿತು.

ಸ್ವಾಗತ ಸಮಿತಿಯ ಪೂರ್ಣ ಜವಾಬ್ದಾರಿಯನ್ನು ಉತ್ತರ ಪ್ರದೇಶದ ಕಾಂಗ್ರೆಸ್ ಪಕ್ಷದ ಶಾಸಕಾಂಗದ ಉಪನೇತಾರ ಶ್ರೀಪ್ರದೀಪ ಮಾತೂರ, ಪ್ರಸ್ತುತ ಎಮ್.ಎಲ್.ಎ. ಇವರು ವಹಿಸಿಕೊಂಡಿದ್ದರು. ಅಕ್ಟೋಬರ್ 24ರಂದು ಶ್ರೀ ಪ್ರಮೋದ್ ಜೈನ್, ಕೇಂದ್ರ ಸರಕಾರದ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಭಾಗವಹಿಸಿದ್ದರು. ಅಲ್ಲದೆ ತಾವು ರಾಜ್ಯ ಸರ್ಕಾರಗಳೊಂದಿಗೆ ಚರ್ಚಿಸಿ ಹಿರಿಯ ನಾಗರಿಕ ಬಡಕುಟುಂಬಕ್ಕೆ ಕೊಡಮಾಡುವ ಪೆನ್ಷನ್ ಪ್ರಚಲಿತ 400/-ರಿಂದ 1000/-ಕ್ಕೆ ಏರಿಸಲು ಪ್ರಯತ್ನಿಸುವುದಾಗಿ ತಿಳಿಸಿದರು. ಹಿರಿಯ ಮಹಿಳೆಯರ ಜೀವನ ಗುಣಮಟ್ಟವನ್ನು, ತಾಂತ್ರಿಕ ಪರಿಜ್ಞಾನವನ್ನು ಉಪಯೋಗಿಸಿ, ಹೇಗೆ ಅಭಿವೃದ್ಧಿಗೊಳಿಸಬಹುದು ಎಂಬುವುದರ ಬಗ್ಗೆ ಚರ್ಚೆಗಳು ನಡೆದವು.

ಅದೇ ದಿನ ಸಂಜೆ ಠರಾವುಗಳ ಬಗ್ಗೆ ದೀರ್ಘ ಚರ್ಚೆ ನಡೆದು ಕೇಂದ್ರ ಸರಕಾರಕ್ಕೆ ಮತ್ತು ರಾಜ್ಯ ಸರಕಾರಗಳಿಗೆ ಕಳಿಸಬೇಕಾದ ಠರಾವುಗಳನ್ನು ಮಂಜೂರು ಮಾಡುವ ಕಾರ್ಯಕ್ರಮ ಸಂಸ್ಥೆಯ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಯವರಿಂದ ನಡೆದು ತಾ.25ರಂದು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಶ್ರೀಮತಿ ಸೋನಿಯಾಗಾಂಧಿಯವರನ್ನು ಭೇಟಿ ಮಾಡಿ ನಿರ್ಣಯಿಸಿದ ಠರಾವುಗಳಲ್ಲಿ ಅಡಕವಾದ ಕೋರಿಕೆಗಳನ್ನು ಅನುಷ್ಠಾನಕ್ಕೆ ತರುವಂತೆ ಅವರ ಸರಕಾರಕ್ಕೆ ರಾಜ್ಯ ಸರಕಾರಗಳಿಗೆ ಒತ್ತಡ ತರುವಂತೆ ಕೇಳಿಕೊಳ್ಳಲಾಯಿತು.

**ಮಹಾಸಭೆಯಲ್ಲಿ ಮಂಜೂರು ಮಾಡಲಾದ ವಿವಿಧ ಠರಾವುಗಳು ಇಂತಿವೆ :**

1) ಬ್ಯಾಂಕು ಠೇವಣಿಗಳ ಮೇಲಿನ ವಿಮೆಯನ್ನು ಈಗಿನ ಒಂದು ಲಕ್ಷದಿಂದ 3 ಲಕ್ಷಕ್ಕೆ ಏರಿಸಬೇಕು. 2) ಹಿರಿಯ ನಾಗರಿಕರ ಠೇವಣಿಗಳಿಗೆ ಸಾಮಾನ್ಯ ಬಡ್ಡಿಗಿಂತ 2% ಹೆಚ್ಚಿನ ಬಡ್ಡಿ ಕೊಡಬೇಕು. 3) 2025ರ ಸಾಲಿನಲ್ಲಿ 60 ಮೀರಿದ ವಯೋಮಾನದ ಹಿರಿಯ ನಾಗರಿಕರ ಸಂಖ್ಯೆ 10 ಕೋಟಿಯಿಂದ 32.5 ಕೋಟಿಗೆ ಏರಲಿದೆ. ಇವರಲ್ಲಿ 66% ಆರ್ಥಿಕವಾಗಿ ಹಿಂದುಳಿದಿರುತ್ತಾರೆ. 11%ರಷ್ಟು 80 ವರ್ಷಗಳಿಗೂ ಮೀರಿದ ಅತಿ ಹಿರಿಯರಿರುತ್ತಾರೆ. ಅವರು ಮರ್ಯಾದೆಯಿಂದ ಬದುಕುವಂತಹ ರಕ್ಷಣೆ ಬೇಕು. 4) ಪ್ರಸ್ತುತ ಎಸ್ಸಾನ್ (ಮಹಾಸಭೆ)ಯಲ್ಲಿ 20 ರಾಜ್ಯಗಳಿಂದ ಮತ್ತು 3 ಯೂನಿಯನ್ ಟೆರಿಟೆರಿಗಳಿಂದ 6 ಲಕ್ಷ ಸದಸ್ಯರಿದ್ದಾರೆ. NPOP (National Policy on Older Persons)ಯ 96ನೆಯ ಪಾರದಲ್ಲಿ ಸೂಚಿಸಿರುವಂತೆ AISCCON (All India Senior Citizen's Confederation) ಸಂಸ್ಥೆಯನ್ನು ಹಿರಿಯ ನಾಗರಿಕರ ರಾಷ್ಟ್ರೀಯ ಏಕಮೇವ ಪ್ರತಿನಿಧಿ ಸಂಸ್ಥೆಯೆಂದು ಪರಿಗಣಿಸಬೇಕು. 5) ಬಿಪಿಎಲ್ ಕಾರ್ಡುದಾರರಿಗೆ, ಮಾಸಿಕ ರೂಪಾಯಿ 1000 ಪೆನ್ಷನ್ ಸಿಗುವಂತಿರಬೇಕು. 6) NPOP ದಾಖಲೆಯಲ್ಲಿ ತಿಳಿಸಿದಂತೆ ಹಿರಿಯ ನಾಗರಿಕರಿಗೆ ಕಡಿಮೆ ಪ್ರಿಮಿಯಂನಲ್ಲಿ ವಯೋಮಾನದ ಶರ್ತಗಳಿಲ್ಲದೆ ಆರೋಗ್ಯವಿಮೆ ದೊರೆಯುವಂತೆ ಮಾಡಬೇಕು. 7) The Maintenance and Welfare of Parents and Senior Citizens Act. 2007ರಲ್ಲಿ ತಿಳಿಸಿದಂತೆ ಪ್ರತಿ ಜಿಲ್ಲೆಗಳಲ್ಲಿಯೂ ಹಿರಿಯ ನಾಗರಿಕರಿಗೆ ವಸತಿ ತೆರೆಯಬೇಕು. ಇಂತಹ ವಸತಿಗಳಲ್ಲಿ ವಾಸಿಸುವ ಹಿರಿಯ ನಾಗರಿಕರಿಗೆ ಆರೋಗ್ಯ ವಿಮೆ, ಆಹಾರ ಅನುದಾನವಲ್ಲದೆ ಹಿರಿಯರ ಪೆನ್‌ಶನ್ ಸಿಗುವಂತಿರಬೇಕು. 8) ಹಿರಿಯ ನಾಗರಿಕರ ಹಿತಾಸಕ್ತಿ ಕಾಪಾಡಲು, ರಾಷ್ಟ್ರೀಯ ಕಮಿಶನ್‌ನ ಸ್ಥಾಪನೆ ಆಗಬೇಕು. 9) ಹಿರಿಯ ನಾಗರಿಕರಿಗೆ ರೈಲಿನಲ್ಲಿ, ತತ್ಕಾಲ್ ಕೋಟಾದಲ್ಲಿ ಕೂಡಾ 50% ಟಿಕೆಟ್‌ನಲ್ಲಿ ರಿಯಾಯಿತಿ ಬೇಕು. 80 ವರ್ಷ ಮೀರಿರುವ ಹಿರಿಯ ನಾಗರಿಕರು ಪ್ರಯಾಣಿಸುವಾಗ ಓರ್ವ ಸಹಾಯಕನನ್ನು ಉಚಿತವಾಗಿ ಕರೆದುಕೊಂಡು ಹೋಗಲು ಅನುಮತಿಬೇಕು. ಸ್ಥಳೀಯ ರೈಲಿನಲ್ಲಿ ಹಿರಿಯರಿಗೆ ಪ್ರತ್ಯೇಕ ಕೋಚ್ ಕಾದಿರಿಸಬೇಕು. ರೈಲ್ವೆ ಸ್ಟೇಷನಿನಲ್ಲಿ ಹಿರಿಯರಿಗೆ ಅನುಕೂಲವಾಗುವಂತಹ ಲಿಫ್ಟ್, ಎಲವೇಟರ್, ರಾಂಪ್, ಕೂಲಿಯರು, ಗಾಲಿಕುರ್ಚಿಗಳು ಸಿಗುವಂತಿರಬೇಕು. 10) ಹಿರಿಯರ ಪ್ರತ್ಯೇಕ ಸೆನ್‌ಸೆಸ್ ತೆಗೆದು ಅವರ ಪ್ರಾಯ, ಒಬ್ಬರೇ ವಾಸಿಸುತ್ತಿದ್ದಾರೆಯೋ, ವಾಸಸ್ಥಳ, ವಿದ್ಯಾಮಟ್ಟ, ಆರ್ಥಿಕಮಟ್ಟ ಇತ್ಯಾದಿ ವಿವರಗಳನ್ನು ಸಂಗ್ರಹಿಸಬೇಕು. 11) ಎಲ್ಲಾ ಮಂತ್ರಿಶಾಖೆಗಳು ಸರಕಾರದ ಯಾವುದೇ ಸವಲತ್ತುಗಳಿಗೆ 60+ ವಯೋಮಾನವನ್ನು ಏಕಪ್ರಕಾರ ನಿಗದಿಪಡಿಸಬೇಕು. 12) ಔಷಧಿ ಕೊಳ್ಳುವಾಗ ಹಿರಿಯ ನಾಗರಿಕರಿಗೆ 20% ಸವಲತ್ತು ದೊರೆಯುವಂತಾಗಬೇಕು. 13) ರಾಜ್ಯಮಟ್ಟದಲ್ಲಿ ಕೌನ್ಸಿಲುಗಳನ್ನು ಪ್ರಾರಂಭಿಸಿ ಅದರಲ್ಲಿ ಹಿರಿಯ ನಾಗರಿಕ ಸಂಸ್ಥೆಗಳಿಂದ ಪ್ರತಿನಿಧಿಗಳನ್ನು ಸೇರಿಸಬೇಕು. ಎಲ್ಲಾ ಯೋಜನೆ, ಕಾನೂನು ಅನುಷ್ಠಾನಕ್ಕೆ ತರುವುದಕ್ಕೆ ಕಮಿಶನರೇಟರನ್ನು ಪ್ರತಿ ಜಿಲ್ಲೆಯಲ್ಲಿಯೂ ನೇಮಿಸಬೇಕು. 14) ಹಿರಿಯ ನಾಗರಿಕರು ಹೆಚ್ಚಾಗಿ 75 ವರ್ಷಗಳ ತನಕ ಆರೋಗ್ಯವಂತರಾಗಿ ಕ್ರಿಯಾಶೀಲರಾಗಿರುತ್ತಾರೆ. ಅವರ ಅನುಭವ, ಪರಿಜ್ಞಾನ ಸಮಾಜದ ಒಂದು ದೊಡ್ಡ ಆಸ್ತಿ. ಆದ್ದರಿಂದ ಮಾನವ ಸಂಪನ್ಮೂಲ ಮಂತ್ರಿಯವರು ಹಿರಿಯ ನಾಗರಿಕರನ್ನು ದೇಶದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯ ಕೆಲಸಗಳಲ್ಲಿ ತೊಡಗಿಸಬೇಕು. 15) ಹಿರಿಯರಿಗಾಗಿ "ವರಿಷ್ಠ ಬಿಮಾ ಯೋಜನೆ" ಆಚರಣೆಗೆ ತಂದು ಹಿರಿಯರಿಗೂ ನಂತರದ ಅವರ ಹಕ್ಕುದಾರರಿಗೂ ಅನುಕೂಲವಾಗುವಂತೆ ಮಾಡಬೇಕು.

ಪ್ರಧಾನ ಕಾರ್ಯದರ್ಶಿಯವರು ಮಾತನಾಡುತ್ತಾ ಹಿರಿಯ ನಾಗರಿಕರ ಆಂದೋಲನ ಕೇವಲ 7 ರಾಜ್ಯಗಳಲ್ಲಿ ಮಾತ್ರ ಕ್ರಿಯಾಶೀಲವಾಗಿದೆ. ಉದಾ:- ಆಂಧ್ರಪ್ರದೇಶ, ಗುಜರಾತ್, ಮಧ್ಯಪ್ರದೇಶ, ಮಹಾರಾಷ್ಟ್ರ, ರಾಜಸ್ತಾನ, ಉತ್ತರ ಪ್ರದೇಶ. ಉತ್ತರಾಖಂಡ ಇತರ ರಾಜ್ಯಗಳು ಸದಸ್ಯರನ್ನು ನೋಂದಾಯಿಸಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ವೃದ್ಧಿಯಾಗಬೇಕು. ರಾಷ್ಟ್ರೀಯ ಪ್ರತಿಭಟನಾ ದಿನವನ್ನು ಆಂಧ್ರಪ್ರದೇಶ, ಮಹಾರಾಷ್ಟ್ರದಲ್ಲಿ ಉತ್ತಮರೀತಿಯಲ್ಲಿ ಕಾರ್ಯಗತಗೊಳಿಸಲಾಗಿತ್ತು, ಆದರೆ ಕರ್ನಾಟಕದಲ್ಲಿ ಬಿಜಾಪುರ, ಬೆಂಗಳೂರು, ಬೀದರ್, ಮಡಿಕೇರಿ, ಉಡುಪಿ ಕೇಂದ್ರಗಳಲ್ಲಿ ಮಾತ್ರ ಆಚರಿಸಲಾಯಿತು. ಆದ್ದರಿಂದ ಎಲ್ಲಾ ಶಹರು ಜಿಲ್ಲಾ ಕೇಂದ್ರ, ತಾಲೂಕು ಕೇಂದ್ರಗಳಲ್ಲಿ ಹಿರಿಯ ನಾಗರಿಕರ ಸಂಸ್ಥೆಗಳನ್ನು ಸ್ಥಾಪಿಸಿ AISCCONನ್ನು ಬಲಪಡಿಸುವುದು ಅಗತ್ಯ ಎಂದು ಹೇಳಿದರು.

ಹೆಚ್ಚಿನ ಸದಸ್ಯರು AISCCON ಪತ್ರಿಕೆಯ ಸದಸ್ಯರಾಗಿಲ್ಲ, ಆದ್ದರಿಂದಲೇ ಹಿರಿಯ ನಾಗರಿಕರ ಕಷ್ಟ ಸಮಸ್ಯೆಗಳ ಪರಿಚಯದ ಅಭಾವ ಉಂಟಾಗಿದೆ. ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಹಿರಿಯರು ಈ ವಾರ್ತಾಪತ್ರಿಕೆಯ ಚಂದಾದಾರರಾಗಿ, ಆಂದೋಲನವನ್ನು ಬಲಪಡಿಸಬೇಕು ಎಂದರು. ಈ ಪತ್ರಿಕೆಯಲ್ಲಿ ಇತರ ಸಂಸ್ಥೆಗಳ ಕಾರ್ಯಕ್ರಮಗಳ ವಾರ್ತಾ ಅಲ್ಲದೆ AISCCONನ ಯೋಜನೆಗಳನ್ನು ಪ್ರಸ್ತುತಗೊಳಿಸಲಾಗುವುದು. ಎಲ್ಲಾ ಸದಸ್ಯರು ಇದಕ್ಕೆ ಒಪ್ಪಿಕೊಂಡರು.

ಅಂತಿಮವಾಗಿ ಪ್ರಧಾನ ಕಾರ್ಯದರ್ಶಿಯವರು ಮುಂದಿನ ಮಹಾ ಅಧಿವೇಶನವನ್ನು (ಸಮ್ಮೇಳನ) ಉಡುಪಿ/ಮಂಗಳೂರು ಅಥವಾ ಇದಕ್ಕೆ ಹತ್ತಿರದ ಪ್ರದೇಶದಲ್ಲಿ ಮಾಡುವ ಸೂಚನೆ ನೀಡಿದರು. ಯಾಕೆಂದರೆ ಕರಾವಳಿ ಪ್ರದೇಶದ ಜನರು ಅತಿಥಿ ಸತ್ಕಾರ, ಆಹಾರ ಪೂರೈಕೆ ಮತ್ತು ಸಂಘಟನಾ ಚಾತುರ್ಯದಲ್ಲಿ ನಿಷ್ಣಾವಂತರು ಎಂದು ತಿಳಿಸಿದರು. ಅಭಿವಂದನೆಯ ನಂತರ ರಾಷ್ಟ್ರಗೀತೆ ಹಾಡುವುದರ ಮೂಲಕ ಮಹಾಸಮ್ಮೇಳನ ಮುಕ್ತಾಯಗೊಂಡಿತು.

ವರದಿ : ಸಿ.ಎಸ್.ರಾವ್

## ಗಣಪುವಿನ ಅವಾಂತರ

ಸಂಗ್ರಹ : M.N.S.

ಗಣಪುವಿಗೆ ವಿಪರೀತ ಯಕ್ಷಗಾನವನ್ನು ವೀಕ್ಷಿಸುವ ಗೀಳು. ಅದರಲ್ಲೂ ಶ್ರೀಯುತ ಚಿಟ್ಟಾಣಿ ರಾಮಚಂದ್ರ ಹೆಗಡೆಯವರ ಭಸ್ಮಾಸುರನ ವೇಷವೆಂದರೆ ಗಣಪುವಿಗೆ ಪಂಚಪ್ರಾಣ. ಒಮ್ಮೆ ಅವನ ಊರಿನಲ್ಲಿ "ಭಸ್ಮಾಸುರ ಮೋಹಿನಿ" ಎಂಬ ಪ್ರಸಂಗವನ್ನು ಹಮ್ಮಿಕೊಂಡಿದ್ದರು. ಗಣಪು ಅಂದು ಎಲ್ಲರಿಗಿಂತ ಮುಂಚಿತವಾಗಿ ಟಿಕೇಟ್ ಪಡೆದು ತನ್ನ ಆಸನದಲ್ಲಿ ಆಸೀನನಾದ.

ಇನ್ನೇನು ಯಕ್ಷಗಾನದ ಮುಕ್ತಾಯ ಘಟ್ಟ, ಮೋಹಿನಿಯ ಮೋಹಕ ನೃತ್ಯಕ್ಕೆ ಮರುಳಾಗಿ ಭಸ್ಮಾಸುರ ತನ್ನ ತಲೆಯ ಮೇಲೆ ಕೈಯನ್ನಿಡುವ ಸನ್ನಿವೇಶ. ಅಷ್ಟರಲ್ಲಿ ತನ್ನ ಪಕ್ಕದ ಆಸನದಲ್ಲಿ ಕುಳಿತ ವ್ಯಕ್ತಿ ಜೋರಾಗಿ ಚೀರಿದಾಗ ರಸಭಂಗವಾದಂತಾಗಿ ಗಣಪು ಪಕ್ಕಕ್ಕೆ ತಿರುಗಿ ನೋಡಿದಾಗಲೇ ಆತನಿಗೆ ಅರಿವಾದದ್ದು ತಾನು ಭಸ್ಮಾಸುರ ಪಾತ್ರವನ್ನು ವೀಕ್ಷಿಸುವುದರಲ್ಲಿ ತಲ್ಲೀನನಾಗಿ ಪಕ್ಕದ ವ್ಯಕ್ತಿಯ ತೊಡೆಗೆ ಬೀಡಿಯ ಚೂರನ್ನು ಆರಿಸಲು ಹಿಸುಕಿದ್ದೆಂದು!

# ತುಳುನಾಡಿನಲ್ಲಿ ಬ್ರಾಹ್ಮಣ್ಯ

ದಿ| ಪ್ರೊ| ಗುರುರಾಜ ಭಟ್ಟರ
ಕೃತಿಯಿಂದ ಸಂಗ್ರಹಿಸಿದ ಭಾಗ
ಸಂಗ್ರಹ : ಸಿ.ಎಸ್.ರಾವ್.

(ಹಿಂದಿನ ಸಂಚಿಕೆಯಿಂದ)

**ದಕ್ಷಿಣ ಕನ್ನಡದಲ್ಲಿ ಸ್ಥಾನಿಕರ ಚರಿತ್ರೆ**

ತುಳುನಾಡಿನಲ್ಲಿ ಬ್ರಾಹ್ಮಣರಲ್ಲಿ ಮೊದಲಿಗರು ಸ್ಥಾನಿಕರೆಂಬುದನ್ನು ಈ ಮೊದಲಿನ ಲೇಖನಗಳಲ್ಲಿ ಖಚಿತಪಡಿಸಿದ್ದಾಯಿತು. ಶಾಸನಾದಿಗಳ ದಾಖಲೆಯ ಆಧಾರದಿಂದಲೂ ಕರ್ನಾಟಕ, ತೆಲುಗು, ತಮಿಳುನಾಡುಗಳಲ್ಲಿ ಇವರಿಗಿದ್ದ ಗೌರವ ಸ್ಥಾನಮಾನಗಳಿಂದಲೂ, ಸ್ಥಾನಿಕರು ಸಮಾಜದ ಮೇಲೆ ವಿಶಿಷ್ಟವಾದ ಪ್ರಭಾವವನ್ನು ಬೀರಿದ್ದರು ಎಂದು ನಿರ್ಧರಿಸಬಹುದು. ತುಳುನಾಡಿನಲಿ, ಅದರಲ್ಲೂ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಅವರು ಬ್ರಾಹ್ಮಣ ವರ್ಗದಲ್ಲಿ ಅತಿ ಪ್ರಾಚೀನರು ಆಗಿದ್ದರೂ, ಕಾಲಾನುಗತಿಕದಿಂದ ತಮ್ಮ ಗೌರವಾನ್ವಿತ ಸ್ಥಾನವನ್ನು ಕಳಕೊಂಡು ಇತ್ತೀಚೆಗಿನವರೆಗೆ ಅಬ್ರಾಹ್ಮಣರೆಂದು (ಪತಿತ ಬ್ರಾಹ್ಮಣರೆಂದು) ಪರಿಗಣಿಸಲ್ಪಟ್ಟು ಅಪಾಂಜ್ತ್ಯೀಯರಾಗಿದ್ದುದು ಅವರು ಸಮಾಜದಲ್ಲಿ ದುರ್ಬಲರಾದುದರಿಂದಲೂ, ಹಾಗೂ ತಮ್ಮ ಅಧಿಕಾರವನ್ನು ನಷ್ಟಪಡಿಸಿಕೊಂಡುದರಿಂದಲೂ ಆಯಿತೆಂದು ತಿಳಿಯಬೇಕು. ನಮ್ಮ ನಾಡಿನಲ್ಲಿ ಸ್ಥಾನಿಕರ ಇತಿಹಾಸವನ್ನು ಸೂಕ್ಷ್ಮವಾಗಿ ಜನತೆಯ ಅವಗಾಹನೆಯ ಬಗ್ಗೆ ಹಾಗೂ ವಿಮರ್ಶೆಯ ಬಗ್ಗೆ ಈ ಕೆಳಗಿನಂತೆ ಕೊಡಲು ಇಚ್ಛಿಸುತ್ತೇನೆ. ಚಾರಿತ್ರಿಕ ಸತ್ಯ ಸಂಗತಿಯನ್ನು ತಿಳಿಯುವುದರಿಂದ ತಪ್ಪು ಅಭಿಪ್ರಾಯಗಳನ್ನು ನೀಗಿಸಿ, ಸರಿಹಾದಿಯಲ್ಲಿ ಮುನ್ನಡೆಯಲು ಆಸ್ಪದ ದೊರೆಯುತ್ತದೆ.

ಸ್ಥಾನಿಕ ಬ್ರಾಹ್ಮಣರನ್ನು ತುಳುವದ ಆರ್ಯೀಕರಣದ ಪ್ರಥಮ ಪ್ರವರ್ತಕರೆಂದು ಹೇಳಬಹುದು. ಸ್ಥಾನಿಕ ಬ್ರಾಹ್ಮಣರೆಂದರೆ ಸ್ಥೂಲವಾಗಿ ಹೇಳುವುದಾದರೆ, ಸ್ಥಳದ ಬ್ರಾಹ್ಮಣರೆಂದು ಅರ್ಥವಲ್ಲದೆ, ಸ್ಥಾನಿಕ ಶಬ್ದವು ಜಾತಿವಾಚಕವಲ್ಲ. ಈ ವಿಷಯವನ್ನು ಹಿಂದೆ ನಿಷ್ಕರ್ಷಿಸಿದೆ. ಕಾಲಕ್ರಮೇಣ ಅಹಿಚ್ಛತ್ರದಿಂದ ಬಂದ ಬ್ರಾಹ್ಮಣರು ಸ್ಥಳದ ಬ್ರಾಹ್ಮಣರನ್ನು ಸ್ಥಾನಿಕ ಬ್ರಾಹ್ಮಣರೆಂದು ಕರೆದರು. ನಮ್ಮ ತುಳುವರಲ್ಲಿ ಹೊರಗಿನಿಂದ ಬಂದವರು ತಾವು ನಿಂತ ಸ್ಥಳದ (ಗ್ರಾಮದ) ಹೆಸರನ್ನು ಇಟ್ಟುಕೊಂಡರು. ಸ್ಥಳವಂದಿಕರಿಗೆ ಸ್ಥಳ ಸೂಚಕ ಹೆಸರಿರಲು ಕಾರಣ ಅವರು ಇತ್ತಲಾಗಿ ಎಂದರೆ 11ನೇ ಶತಮಾನದಲ್ಲಿ ಬಂದು ನೆಲೆಸಿದವರಲ್ಲ. ಬ್ರಾಹ್ಮಣರ ಮೂರನೆಯ ವಲಸೆಯ ಪರಿಣಾಮವಾಗಿ ಬಂದು ನೆಲೆ ನಿಂತವರು. ತಾವು ಪ್ರಥಮ ನಿಂತ ಸ್ಥಳಗಳ ಹೆಸರನ್ನು ಇಟ್ಟುಕೊಂಡರು. ಹೀಗೆ ಕೋಟದವರು, ಶಿವಳ್ಳಿಯವರು, ಕಂದಾವರದವರು, ಪಂಚಗ್ರಾಮದವರು ಇತ್ಯಾದಿ ಹೆಸರು ಬಂತು. ಇತರ ದ್ರಾವಿಡ ದೇಶಗಳಾದ ತಮಿಳು, ತೆಲುಗು ದೇಶದ ಬ್ರಾಹ್ಮಣರಲ್ಲಿ ಅಯ್ಯರ್, ಅಯ್ಯಗಾರು, ಅಯ್ಯಡು ಎಂದಿರುವಂತೆ ಸ್ಥಾನಿಕರಲ್ಲಿ ಅಯ್ಯವೆಂಬ ಹೆಸರೇ ಹೆಚ್ಚಿರುವುದು. ಕೆಲವರಿಗೆ ಅವರ ಉದ್ಯೋಗ ಸೂಚಕವಾದ ಹೆಬ್ಬಾರ, ಶಾಸ್ತ್ರಿ ಶರ್ಮ, ಭಟ್ಟ, ಉಪಾಧ್ಯಾಯ, ಅಧಿಕಾರಿ ಎಂಬ ಹೆಸರುಗಳೂ ಇವೆ. ಶಿವಳ್ಳಿಯವರಲ್ಲಿ ಇದ್ದಂತೆ ತ್ತಾಯ, ಲ್ಲಾಯ, ನಾಯ, ರಾಯ ಇತ್ಯಾದಿ ಹೆಸರುಗಳಿಲ್ಲ.

ಸ್ಥಾನಿಕ ಎಂಬುದಕ್ಕೆ ನ್ಯಾಯದ ಪರವಾಗಿ ತನಿಕೆ ನಡೆಸಿ ನ್ಯಾಯತೀರ್ಮಾನವನ್ನು ಮಾಡುವವನೆಂಬ ಅರ್ಥವೂ ಇದೆ. ಮುಂಚಿನ ಕಾಲದಲ್ಲಿ ಎಲ್ಲರಿಗೂ ನ್ಯಾಯಸ್ಥಾನವು ದೇವಾಲಯವಾಗಿತ್ತು. ಆ ದೇವಸ್ಥಾನದ ಅಧಿಕಾರಿಯೇ ಸ್ಥಾನಿಕರು. ಪ್ರತಿ ಗ್ರಾಮದಲ್ಲೂ (ಈಗಿನ 3-4 ಗ್ರಾಮಗಳೂ ಸೇರಿ ಒಂದು ಗ್ರಾಮ) ಒಂದೊಂದು ದೇವಸ್ಥಾನವಿದ್ದು, ಅಲ್ಲಿ ಗ್ರಾಮಸ್ಥರ ನ್ಯಾಯವನ್ನು ದೇವಸ್ಥಾನದ ನಡೆಯಲ್ಲಿ ಸತ್ಯ ಹೇಳಿಸಿ ದೇವಳದ ಸ್ಥಾನಿಕನು ಕೊಡುವವನಾಗಿದ್ದನು. ಆದುದರಿಂದ ಶಾಸನಾದಿಗಳಲ್ಲಿ ದೇವರ ಸ್ಥಾನಿಕ ಎಂದಿರುವುದು ಮಾತ್ರವಲ್ಲದೆ ಗ್ರಾಮದ ಸ್ಥಾನಿಕ, ಪಟ್ಟಣದ ಸ್ಥಾನಿಕ ಎಂದು ಕಂಡುಬರುವುದೂ ಗಣನೀಯವಾಗಿದೆ. ಈಗ ನ್ಯಾಯಾಲಯದಲ್ಲಿ ಅಂತಸ್ತುಗಳಿದ್ದಂತೆ, ಹಿಂದೆ ಗ್ರಾಮ ದೇವಸ್ಥಾನ, ಸೀಮೆ ದೇವಸ್ಥಾನ, ಮಂಡಲ ದೇವಸ್ಥಾನಗಳೆಂದು ಇದ್ದುವು. ಇವುಗಳಲ್ಲಿ ನ್ಯಾಯ ತೀರ್ಮಾನಿಸುವ ಅಧಿಕಾರಿಯು ಸ್ಥಾನಿಕನು. ಈ ಸ್ಥಳಗಳಲ್ಲಿ ತೀರ್ಮಾನವಾಗದ ಲೇವಾದೇವಿಯು ಅರಸನ ಸ್ಥಾನಕ್ಕೆ ಒಯ್ಯಲ್ಪಡುತ್ತಿತ್ತು. The Third Dynasty of Vijayanagar by Venkatramana ಎಂಬ ಪುಸ್ತಕದಲ್ಲಿ ತಿಳಿಸುವಂತೆ ವಿಜಯನಗರವು ಮುಸಲ್ಮಾನರಿಂದ ಆಕ್ರಮಿಸಲ್ಪಡುವ ಕಾಲದಲ್ಲಿ ದೇವಾಲಯದ ಎಲ್ಲಾ ಹಕ್ಕುಗಳನ್ನು ಸ್ಥಾನಿಕ ಬ್ರಾಹ್ಮಣರಿಗೆ ಬಿಟ್ಟುಕೊಡಲಾಗಿದೆ ಎಂದು ತಿಳಿದು ಬರುತ್ತದೆ.

ನಮ್ಮ ನಾಡಿನಲ್ಲಿ ಶಿವ ಬ್ರಾಹ್ಮಣರು ಸ್ಥಾನಿಕರೂ ಬೇರೆ ಬೇರೆ ಪಂಗಡವಲ್ಲ. ಸ್ಥಾನಿಕರೇ ಶಿವ ಬ್ರಾಹ್ಮಣರು. ಸ್ಥಾನಿಕರಿಗೆ ಶಿವಬ್ರಾಹ್ಮಣರೆಂಬ ಹೆಸರು ಹೇಗೆ ಬಂತು ಮತ್ತು ಏಕೆ, ಯಾವಾಗ ಬಂತು ಎಂಬ ಪ್ರಶ್ನೆಯನ್ನು ಉತ್ತರಿಸುವುದು ಉಚಿತ.

ಸ್ಥಾನಿಕವೆಂಬುದು ಜಾತಿವಾಚಕವಲ್ಲ ಎಂಬ ವಿಚಾರ ಈ ಮೊದಲೇ ಹೇಳಿದೆ. ಸ್ಥಾನಿಕ ಯಾ ಶಿವಬ್ರಾಹ್ಮಣರಿಗೆ ಮೂಲಸ್ಥಳವು ಸುಬ್ರಹ್ಮಣ್ಯವೇ ಆಗಿತ್ತು. ಆದುದರಿಂದ ಇವರಿಗೆ ಸುಬ್ರಹ್ಮಣ್ಯ ಸ್ಥಾನಿಕರೆಂದು ಹೆಸರು. ಈ ಸ್ಥಾನಿಕರು ಅನಾದಿಯಿಂದಲೂ ಶ್ರೀ ಶೃಂಗೇರಿ ಜಗದ್ಗುರು ಸಂಸ್ಥಾನದ ಶಿಷ್ಯರು. ಈ ಕನ್ನಡ ಜಿಲ್ಲೆಯ ಈ ಸ್ಥಾನಿಕರಿಗೂ, ಇತರರಿಗೂ, ಶೃಂಗೇರಿಯ ಶಾಖಾಮಠವಿರುವುದು. ಶ್ರೀ ಸುಬ್ರಹ್ಮಣ್ಯದಲ್ಲಿ ಅದು ಈಗಲೂ ಇದೆ. ಈ ಸ್ಥಳೀಯ ಸ್ಥಾನಿಕ ಬ್ರಾಹ್ಮಣರು ಶೃಂಗೇರಿಯ ಆಚಾರ ವಿಚಾರಾಧಿಕಾರಿಗಳ ಕಡೆಯಿಂದ ಮಠ ಮುದ್ರಾಧಿಕಾರಿಗಳಾಗಿದ್ದರು. ಅಲ್ಲದೆ ಶ್ರೀ ಸುಬ್ರಹ್ಮಣ್ಯ ದೇವರನ್ನು ಪೂಜಿಸಿಕೊಂಡು ದೇವಳದ ಅಧಿಕಾರವನ್ನು ನಡೆಸಿಕೊಂಡಿದ್ದರು. ಇವರ ಅಧಿಕಾರ ಸಾಧಾರಣ ಕ್ರಿ.ಶ.1843ರ ನಂತರ ಅಂಶ ಮಾಧ್ವರ ಪಾಲಾಯಿತು. ಕ್ರಿ.ಶ.1817ರ ವರೆಗೆ ಪೂರ್ಣ ಇವರ ಕೈಯಲ್ಲೇ ಇದ್ದು ಅನಂತರ ರೆಗ್ಯುಲೇಟಿಂಗ್ ಆಕ್ಟು ಪ್ರಕಾರ ಆಡಳಿತೆಯನ್ನು 'ಸರ್ಕಾರ' ವಹಿಸಿಕೊಂಡು 1843ರ ವರೆಗೆ ಇವರನ್ನೇ ಆಡಳಿತೆ ಮುಕ್ತೇಸರರನ್ನಾಗಿ (Trustee) ಮಾಡಿತ್ತು. ಆ ಕಾಲದಲ್ಲಿ ಆಡಳಿತೆದಾರರೂ, ದೇವಳದ ಮೂಲಸ್ಥಾಪಕರೂ ಆದ ಸ್ಥಾನಿಕ ಹೆಬ್ಬಾರರು ಒಬ್ಬ ಮುತ್ಸದ್ಧಿ ಯಾ ಮೆನೆಜರರನ್ನು ಇಟ್ಟುಕೊಂಡು ಸರ್ಕಾರಕ್ಕೆ ಲೆಕ್ಕಪತ್ರಗಳನ್ನು ಕಳುಹಿಸುತ್ತಿದ್ದರು. ಆಗ ಸುಬ್ರಹ್ಮಣ್ಯಕ್ಕೆ ಬಂಟ್ವಾಳ ತಾಲೂಕಿನ ತಹಶಿಲ್ದಾರರೇ ಅಧಿಕಾರಿಗಳಾಗಿದ್ದರೆಂದು ತಿಳಿದು ಬರುತ್ತದೆ. ಈ ಹೆಬ್ಬಾರರ ಆಡಳಿತ ಸಮಯದಲ್ಲಿ 'ಮರೋಜ' ರೆಂಬವರೇ ಅರ್ಚಕರಾಗಿದ್ದರು. ಮರೋಜ ಎಂಬ ಪದಕ್ಕೆ ಮಯೂರ ವಾಹನನ ಅರ್ಚಕವೆಂದರ್ಥ (ಮೊರ-ಮಯೂರ; ಓಜ-ಆಚಾರ್ಯ). ಈ ಅರ್ಚಕರ ಮೂಲ ಸುಬ್ರಹ್ಮಣ್ಯಕ್ಕೆ ಹತ್ತು ಮೈಲು ದೂರದಲ್ಲಿರುವ ಬಳಪ (ಬಳ್ಪ) ಎಂಬ ಗ್ರಾಮದಲ್ಲಿಯಾಗಿತ್ತು. ಇಲ್ಲಿ ಕೂಡ ಇವರಿಗೆ ಶ್ರೀ ದುರ್ಗಾಪರಮೇಶ್ವರಿ ದೇವಳದ ಅರ್ಚಕತನವಿದೆ.

ಅದು ಈಗಲೂ ಇದೆ. ಅದಕ್ಕೆ ಸರ್ಕಾರದಿಂದ 120 ರೂಪೈ ತಸದೀಕು ಇದೆ. ಈ ಮೊರೋಜ ಅರ್ಚಕತನವು ಸಾಧಾರಣ ಕ್ರಿ.ಶ.1820ರಲ್ಲಿ ಹೋಗಿರಬಹುದು ಎಂದು ತಿಳಿದುಬರುತ್ತದೆ.

ಸ್ಥಾನಿಕ ಬ್ರಾಹ್ಮಣರಿಗೆ ಶಿವಬ್ರಾಹ್ಮಣರೆಂಬ ಹೆಸರು ಹೇಗೆ, ಯಾವಾಗ, ಏಕೆ ಬಂತು? ಹಿಂದಿನಿಂದ ಕನ್ನಡ ಜಿಲ್ಲೆಯ ಎಲ್ಲಾ ಶಿವ ಸಂಬಂಧವಾದ, ದುರ್ಗಾ, ಗಣಪತಿ, ಸುಬ್ರಹ್ಮಣ್ಯ ದೇವಾಲಯಗಳು ಹಾಗೂ ವಿಷ್ಣು ದೇವಾಲಯಗಳು ಕೂಡಾ ಸ್ಥಾನಿಕರ ಆಡಳಿತೆ ಮತ್ತು ಪೂಜೆಯಲ್ಲಿದ್ದವು. ಹೊಸತಾಗಿ ಬಂದ ಬ್ರಾಹ್ಮಣ ಪಂಗಡಗಳು ಆಯಾಯಾ ಗ್ರಾಮಗಳಲ್ಲಿ ನೆಲೆಸಿ,ಕ್ರಮೇಣ ತಮ್ಮ ಜನಸಂಖ್ಯೆ ಹೆಚ್ಚಿದಂತೆ ಸ್ಥಾನಿಕ ಬ್ರಾಹ್ಮಣರಿಂದ, ಅವರ ಅಧಿಕ ಸಂಪಾದನೆಯುಳ್ಳ ದೇವಾಲಯಗಳಲ್ಲಿ ಪೂಜೆ ಮಾಡುವ ಉದ್ಯೋಗವನ್ನು ಸಂಬಳಕ್ಕೆ ವಹಿಸಿಕೊಂಡವು. ದೇವಳದಲ್ಲಿ ವರ್ಷಗಳೆದಂತೆ ಸ್ಥಾನಿಕರಲ್ಲದ ಬ್ರಾಹ್ಮಣರ ವರ್ಚಸ್ಸು ಬೆಳೆಯಿತು.

(ಮುಂದುವರಿಯುವುದು)

''ಭೀಮರಥ ಶಾಂತಿ'' ಸಂಭ್ರಮ

ದಿನಾಂಕ 18-01-2011ರಂದು ''ಭೀಮರಥ ಶಾಂತಿ''ಯನ್ನು ಆಚರಿಸುತ್ತಿರುವ



ಶ್ರೀ ಗೋಪಾಲಕೃಷ್ಣ ಕೋಲ್ಪೆ ಮತ್ತು ಶ್ರೀಮತಿ ಯಶೋದಾ ಕೋಲ್ಪೆ, ಕಡಬ

ಇವರಿಗೆ ಶುಭ ಹಾರೈಸುವ,

ಶ್ರೀ ಮಂಜುನಾಥ ಹೆಬ್ಬಾರ್ (ಅಳಿಯ)

ಶ್ರೀಮತಿ ರಜನಿ ಹೆಬ್ಬಾರ್ (ಮಗಳು)

ಕು| ವೈಷ್ಣವಿ (ಮೊಮ್ಮಗಳು)

## ಮಾಂಗಲ್ಯಂ ತಂತುನಾನೇನ ....

ಮೈಸೂರಿನಲ್ಲಿರುವ ಡಾ। ಕೋಲ್ಪೆ ರಾಧಾಕೃಷ್ಣ ಮತ್ತು ಶ್ರೀಮತಿ ಗೀತಾರವರ ಪುತ್ರಿ **ಕು। ತೇಜಸ್ವಿನಿ** ಹಾಗೂ ಡಾ। ಚಕ್ಕಿರಾಲ ಶಿವಸೂರ್ಯ ಮತ್ತು ಶ್ರೀಮತಿ ನಾಗಮಣಿಯವರ ಪುತ್ರ **ಸಿ.ಎಸ್. ಸುರೇಂದ್ರ**, ಇವರ ವಿವಾಹವು ತಾ.29-12-2010 ರಂದು ಮೈಸೂರು ಕುವೆಂಪುನಗರದಲ್ಲಿರುವ ಚಿಕ್ಕಮ್ಮ ನಿಕೇತನದಲ್ಲಿ ನೆರವೇರಿತು.

★★★ ★★★

ಉಡುಪಿ ವಡಭಾಂಡೇಶ್ವರದಲ್ಲಿರುವ ಶ್ರೀ ರಘು ರಾಮರಾವ್ ಮತ್ತು ಶ್ರೀಮತಿ ಭಾರತಿ ಇವರ ಪುತ್ರ **ಸಾಯಿಶ್** ಹಾಗೂ ಹಾಲಾಡಿ ಮುದೂರಿಯ ಶ್ರೀ ಸೀತಾರಾಮ ಹೆಬ್ಬಾರ್ ಮತ್ತು ಶ್ರೀಮತಿ ರಾಜಲಕ್ಷ್ಮೀರವರ ಪುತ್ರಿ **ದಿವ್ಯಶ್ರೀ** ಇವರ ವಿವಾಹವು ತಾ.15-12-2010 ರಂದು ಕುಂದಾಪುರ ಹಂಗಳೂರು ಶ್ರೀ ವೆಂಕಟಲಕ್ಷ್ಮೀ ಸಭಾಗೃಹದಲ್ಲಿ ನೆರವೇರಿತು.

★★★ ★★★

ಮಂಗಳೂರಿನ ಆಡೂರು ಶ್ರೀ ವಿಠಲ ರಾವ್ ಮತ್ತು ಶ್ರೀಮತಿ ವೀಣಾ ಕುಮಾರಿಯವರ ಪುತ್ರ **ವಿಶ್ವಾಸ್** ಹಾಗೂ ಮಂಗಳೂರಿನಲ್ಲಿರುವ ಕುಕ್ಕೆಹಳ್ಳಿ ಶ್ರೀ ಗುಂಡೂರಾಯರ ಪುತ್ರ ಶ್ರೀ ಚಂದ್ರಶೇಖರ ರಾವ್ ಮತ್ತು ಶ್ರೀಮತಿ ಸರಸ್ವತಿಯವರ ಪುತ್ರಿ **ಸ್ವಾತಿ** ಇವರ ವಿವಾಹವು ತಾ.29-12-2010 ರಂದು ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಮಂಟಪದಲ್ಲಿ ನೆರವೇರಿತು.

★★★ ★★★

ದಿ। ಕಟಪಾಡಿ ರಮೇಶರಾವ್ ಮತ್ತು ಶ್ರೀಮತಿ ಸುಜಾತರವರ ಪುತ್ರ **ಅಮಿತ್** ಹಾಗೂ ಮುಂಬಯಿಯ ಶ್ರೀ ದಿಲೀಪ್ ಮತ್ತು ಶ್ರೀಮತಿ ಶೈಲಜ ಶರ್ಮರವರ ಪುತ್ರಿ **ಪೂಜಾ** ಇವರ ವಿವಾಹವು ತಾ.30-12-2010 ರಂದು ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಮಂಟಪದಲ್ಲಿ ನೆರವೇರಿತು.

★★★ ★★★

ಜಂಬೆ ಶ್ರೀ ಅಚ್ಯುತ ಹೆಬ್ಬಾರ್ ಇವರ ಮೊಮ್ಮಗ, ಶ್ರೀಮತಿ ಶೋಭಾ ಮತ್ತು ಶ್ರೀ ಕೃಷ್ಣ ಗೋಪಾಲ ಹೆಬ್ಬಾರ್ ಇವರ ಪುತ್ರ **ಸನತ್ ಕುಮಾರ್** ಹಾಗೂ ಕೆಮ್ಮಣ್ಣು ಶ್ರೀಮತಿ ಸುಲೋಚನ ಮತ್ತು ಶ್ರೀ ಕೆ. ಸತೀಶ್ ಕುಮಾರ್ ಇವರ ಪುತ್ರಿ **ರಾಧಿಕಾ** ಇವರ ವಿವಾಹವು ತಾ.06-01-2011 ರಂದು ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಮಂಟಪದಲ್ಲಿ ನೆರವೇರಿತು.

★★★ ★★★

ಶೃಂಗೇರಿ ಮಣಿಜಲು ಎಚ್.ಎನ್. ಶ್ರೀಕಂಠ ರಾವ್ ಮತ್ತು ಶ್ರೀಮತಿ ಶಾರದಮ್ಮನವರ ಪುತ್ರ **ಸುಜೀತ್ ಕುಮಾರ್** ಹಾಗೂ ಶೃಂಗೇರಿ ಶ್ರೀ ಟಿ.ಎಸ್.ನಾಗರಾಜ ಮತ್ತು ಶ್ರೀಮತಿ ಪದ್ಮಾವತಿಯವರ ಪುತ್ರಿ **ವೀಣಾ** ಇವರ ವಿವಾಹವು ತಾ.20-12-2010ರಂದು ಶೃಂಗೇರಿ ಶ್ರೀ ವಿದ್ಯಾ ಭಾರತಿ ಕಲ್ಯಾಣಮಂದಿರದಲ್ಲಿ ನೆರವೇರಿತು.

★★★ ★★★

ಪುತ್ತೂರು ತೋಟಾಲು ಶ್ರೀ ಶಶಿಧರ ರಾವ್ ಮತ್ತು ಶ್ರೀಮತಿ ಜ್ಯೋತಿ ಇವರ ಪುತ್ರ **ಗಣೇಶ** ಹಾಗೂ ಮಂಗಳೂರು ಉಜ್ಜೋಡಿ ಶ್ರೀ ಭುಜಂಗ ರಾವ್ ಮತ್ತು ಶ್ರೀಮತಿ ಸುನೀಲ್‌ರವರ ಪುತ್ರಿ **ಸೌಮ್ಯಾ** ಇವರ ವಿವಾಹವು ತಾ.30-12-2010 ರಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾಭವನದಲ್ಲಿ ನೆರವೇರಿತು.

★★★ ★★★

ಮುಂಬಯಿಯಲ್ಲಿರುವ ಶ್ರೀ ಪಿ. ನಾರಾಯಣ ರಾವ್ ಮತ್ತು ಶ್ರೀಮತಿ ಇಂದಿರಾರವರ ಪೌತ್ರ (ಶ್ರೀ ಪಿ. ಸೂರ್ಯರಾವ್ ಮತ್ತು ಶ್ರೀಮತಿ ಶಿಲ್ಪಾರವರ ಪುತ್ರ) **ಸಂಕೇತ್** ಹಾಗೂ ಸತಾರದಲ್ಲಿದ್ದ ಕೀರ್ತಿಶೇಷ ಕೆ. ಶ್ಯಾಮರಾವ್ ಶ್ಯಾನುಭೋಗ್, ಅಲೆವೂರು ಮತ್ತು ದಿ। ಸುಂದರಿ ಬಾಯಿಯವರ ಪುತ್ರ ಶ್ರೀ ಕೆ. ಸುಧಾಕರ ಶ್ಯಾನುಭಾಗ್ ಮತ್ತು ಶ್ರೀಮತಿ ಅನುರಾಧ ಶ್ಯಾನುಭೋಗ್‌ರವರ ಪುತ್ರಿ **ಸಮೀರಾ** ಇವರ ವಿವಾಹವು ತಾ.30-12-2010 ರಂದು ಸತಾರದ ಸಾಯಿಬಾಬಾ ಮಂದಿರದ ಬಳಿ ಇರುವ ಹೊಟೇಲ್ ಲೇಕ್‌ವ್ಯೂ ಸಭಾಂಗಣದಲ್ಲಿ ನೆರವೇರಿತು.

## ಮಕರಮಾಸ ವಿಶೇಷ ದಿನಗಳು

| | |
|---|---|
| 14-01-2011 | ಮಕರ ಸಂಕ್ರಮಣ |
| 16-01-2011 | ಏಕಾದಶೀ |
| 17-01-2011 | ಪ್ರದೋಷಃ |
| 19-01-2011 | ಪೂರ್ಣಿಮಾ |
| 22-01-2011 | ಸಂಕಷ್ಟಹರ ಚತುರ್ಥಿ<br>ಚಂದ್ರೋದಯ ಘಂಟೆ ರಾತ್ರಿ 8-13ಕ್ಕೆ |
| 24-01-2011 | ಶ್ರಾವಣ ನಕ್ಷತ್ರಾರಂಭ |
| 29-01-2011 | ಸರ್ವೇಕಾದಶೀ |
| 31-01-2011 | ಪ್ರದೋಷಃ |
| 02-02-2011 | ಅಮಾವಾಸ್ಯಾ |
| 13-02-2011 | ಕುಂಭ ಸಂಕ್ರಮಣ |

## ಅಭಿನಂದನೆ



### ಯುವ ಪ್ರತಿಭೆ ಕುಮಾರಿ ಪ್ರಗತಿ ಭಂಡಿ ಪೆರ್ಡೂರು

ಜಿಲ್ಲಾಮಟ್ಟದ ವಿಜ್ಞಾನ ಸಮಾವೇಶದಲ್ಲಿ ಹೈಸ್ಕೂಲು ವಿಭಾಗದಲ್ಲಿ ಪ್ರಥಮ ಸ್ಥಾನಗಳಿಸಿದ್ದು, ಮೈಸೂರಿನಲ್ಲಿ ನಡೆದ ರಾಜ್ಯಮಟ್ಟದ ಮಕ್ಕಳ ವಿಜ್ಞಾನ ಸಮಾವೇಶದಲ್ಲಿ 'Captain' ಆಗಿ ಈಕೆ ಪ್ರತಿನಿಧಿಸಿರುತ್ತಾಳೆ. ಅಲ್ಲದೆ ಇತ್ತೀಚೆಗೆ ನಡೆದ ಪ್ರತಿಭಾ ಕಾರಂಜಿ-2010 ಸ್ಪರ್ಧೆಯಲ್ಲಿ ಇಂಗ್ಲೀಷ್ ಹಾಗೂ ಹಿಂದಿ ಭಾಷಣ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನಗಳಿಸಿ ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿರುತ್ತಾಳೆ. ಉಡುಪಿ ಜಿಲ್ಲಾ ಮಟ್ಟದ ಭಾಷಣ ಸ್ಪರ್ಧೆಯನ್ನು ಬಳಕೆದಾರರ ವೇದಿಕೆ ನಿಯೋಜಿಸಿದ್ದು ಇದರಲ್ಲಿ ಕೂಡ ಇಂಗ್ಲೀಷ್ ಭಾಷಣ ಸ್ಪರ್ಧೆಯಲ್ಲಿ ಪ್ರಥಮ ಬಂದಿರುತ್ತಾಳೆ. ಮಣಿಪಾಲ MIT ಯಲ್ಲಿ ನಡೆದ Pick and Speech (ಇಂಗ್ಲೀಷ್) ಸ್ಪರ್ಧೆಯಲ್ಲಿ ಪ್ರಥಮ ಬಂದಿರುತ್ತಾಳೆ.

ಈಕೆ ಪ್ರಸ್ತುತ ಮಣಿಪಾಲ ಎಂಜೆಸಿ ಕಾಲೇಜಿನ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಳೆ. ಸಿಂಡಿಕೇಟ್ ಬ್ಯಾಂಕು ಹರಿಹರಪುರ, ಕೊಪ್ಪ ತಾಲೂಕು ಇದರ ಶಾಖಾಧಿಕಾರಿ ಪೆರ್ಡೂರು ರವೀಂದ್ರ ಭಂಡಿ ಹಾಗೂ ಶ್ರೀಮತಿ ವಾಣಿ ಭಂಡಿ ದಂಪತಿಗಳ ಸುಪುತ್ರಿಯಾಗಿರುವ ಈಕೆಯ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

## ಶುಭ ಜನನ

ಮಂಗಳೂರಿನಲ್ಲಿರುವ ಶ್ರೀಮತಿ ಮತ್ತು ಶ್ರೀ ದಯಾನಂದ ರಾವ್, ಪಡುಬಿದ್ರಿ ಇವರ ಪುತ್ರ ಪ್ರಸ್ತುತ ಇಂಗ್ಲೆಂಡಿನಲ್ಲಿ ವಾಸ್ತವ್ಯದಲ್ಲಿರುವ ದೀಪಕ್ ಹಾಗೂ ಅಮಿತ ದಂಪತಿಗಳಿಗೆ ತಾ.1-1-11 ರಂದು ಹೆಣ್ಣು ಮಗುವಿನ ಜನನ.

★★★ ★★★

ಮನ್ನಿಪ್ಪಾಡಿ ಶ್ರೀ ಲಕ್ಷ್ಮೀನಾರಾಯಣ ಶ್ಯಾನುಭಾಗ್ ಮತ್ತು ಶ್ರೀಮತಿ ಮೋಹನ ಎಲ್.ಎನ್. ಶ್ಯಾನುಭಾಗ್ ಇವರ ಪುತ್ರ ಹರ್ಷವರ್ಧನ ಶ್ಯಾನುಭಾಗ್ ಹಾಗೂ ಶ್ರೀ ವೈ. ಮುರಲೀಧರ ರಾವ್ ಮತ್ತು ಶ್ರೀಮತಿ ಜಯಲಕ್ಷ್ಮೀ ಎಮ್.ರಾವ್ ಇವರ ಪುತ್ರಿ ಶ್ರೀಮತಿ ಜ್ಯೋತಿ ಹರ್ಷವರ್ಧನ ಶ್ಯಾನುಭಾಗ್ ಇವರಿಗೆ ತಾ.11-12-2010ರಂದು ಗಂಡು ಮಗುವಿನ ಜನನ.

## ಉಪನಯನ

**ಚಿ। ಕಾರ್ತಿಕ್**

ಮುಂಬಯಿ ಭಾರತೀಯ ರಿಸರ್ವ್‌ಬ್ಯಾಂಕ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಉಬರಳೆ ಶ್ರೀ ಸಂತೋಷಕುಮಾರ್ ಮತ್ತು ಶ್ರೀಮತಿ ಅಮಿತಾರವರ ಮಗ ಹಾಗೂ ಉಡುಪಿ ಸ್ಥಾನಿಕ ಸಂಘದ ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಉಷಾ ಶ್ಯಾನುಭೋಗರ ಪೌತ್ರ ಚಿ। ಕಾರ್ತಿಕ್‌ನ ಉಪನಯನವು ಮಂಗಳೂರಿನ 'ಶ್ರೀ ಸುಬ್ರಹ್ಮಣ್ಯ ಸಭಾಭವನ'ದಲ್ಲಿ ತಾ.29-12-2010ರಲ್ಲಿ ನೆರವೇರಿತು.

## ಗೃಹಪ್ರವೇಶ

**'ಸಾತ್ವಿಕ್'**

ಉಡುಪಿ ನಗರಸಭೆಯಲ್ಲಿ ಉದ್ಯೋಗಿ ಯಾಗಿದ್ದು ನಿವೃತ್ತರಾಗಿದ್ದ ವಾದಿರಾಜ ರೋಡ್ ಬೈಲಕೆರೆ ನಿವಾಸಿ ಶ್ರೀ ಮಟ್ಟು ಸುಧಾಕರ ರಾವ್‌ರವರು ತಮ್ಮ ಮೊದಲನೆಯ ಮನೆಯ ಸ್ಥಳದಲ್ಲಿ ನೂತನವಾಗಿ ಕಟ್ಟಿಸಿದ ಗೃಹ 'ಸಾತ್ವಿಕ್' ಇದರ ಗೃಹಪ್ರವೇಶೋತ್ಸವವನ್ನು ತಾ.16-12-10 ರಂದು ನೆರವೇರಿಸಿದರು.

## ನಿಧನ

**ಕೃಷ್ಣಮೂರ್ತಿರಾವ್ ಎಲ್ಲೂರು**

ಮುದರಂಗಡಿಯಲ್ಲಿ ವಾಸವಾಗಿದ್ದ ಎಲ್ಲೂರು ಶ್ರೀ ಕೃಷ್ಣಮೂರ್ತಿರಾಯರು ತಾ.23-12-2010 ರಂದು ಉಡುಪಿ ಮಗಳ ಮನೆಯಲ್ಲಿ ನಿಧನ ಹೊಂದಿದರು. ಮೃತಕಾಲಕ್ಕೆ ಇವರಿಗೆ ಸುಮಾರು 85 ವರ್ಷ ಪ್ರಾಯವಾಗಿದ್ದು ಇವರು ಪತ್ನಿ, ಮೂವರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧು ಬಳಗದವರನ್ನು ಅಗಲಿದ್ದಾರೆ.

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

**ಡಾ। ವೈ. ಸುದರ್ಶನ ರಾವ್**

**ಪ್ರಶ್ನೆ: ಕಡಿಮೆ ರಕ್ತದೊತ್ತಡ** (Low B.P., Hypotension) **ಎಂದರೇನು?**

**ಉತ್ತರ:** ದೇಹದ ಎಲ್ಲ ಅಂಗಾಂಗಗಳಿಗೆ ಬೇಕಾದ ಶಕ್ತಿಯನ್ನೊದಗಿಸುವ ಗ್ಲುಕೋಸ್, ಪ್ರಾಣವಾಯುವಾದ ಆಮ್ಲಜನಕ, ಅಂಗಗಳ ಬೆಳವಣಿಗೆಗೆ ಬೇಕಾಗುವ ಪ್ರೋಟೀನ್, ವಿಟಮಿನ್ ಇತ್ಯಾದಿ ಪದಾರ್ಥಗಳನ್ನು ಸರಬರಾಜು ಮಾಡುವುದು (ಶುದ್ಧ ರಕ್ತ) ಹಾಗೂ ಈ ಅಂಗಗಳಲ್ಲಿ ಉತ್ಪಾದನೆಯಾದ ಕಶ್ಮಲಗಳನ್ನು (ಅಶುದ್ಧ ರಕ್ತ) ಅಲ್ಲಿಂದ ಸಾಗಿಸುವುದು ರಕ್ತ ಪರಿಚಲನಾಂಗದ ಕೆಲಸ. ಶುದ್ಧ ಹಾಗೂ ಅಶುದ್ಧ ರಕ್ತನಾಳಗಳು, ಲೋಮನಾಳಗಳು ಮತ್ತು ಹೃದಯ ಇವು ಮೂರು ಈ ಅಂಗದ ಭಾಗಗಳು. ಲೋಮನಾಳಗಳು ಆಯಾ ಅಂಗದ ಒಳಗೇ ಇದ್ದು, ಕೂದಲಿಗಿಂತಲೂ ಸಪೂರವಾಗಿದ್ದು ಒಂದನ್ನೊಂದು ಕೂಡಿಕೊಂಡು ಆಯಾ ಅಂಗದ ಆಕಾರದಲ್ಲಿ ನೇಯ್ದ ಬಲೆಯಂತೆ ಕಾಣುತ್ತವೆ. ಲೋಮನಾಳಗಳಿಂದ ಗ್ಲುಕೋಸ್, ಆಮ್ಲಜನಕ ಇತ್ಯಾದಿಗಳು ಅಂಗಾಂಶಕ್ಕೂ, ಕಶ್ಮಲಗಳು ಅಂಗಾಂಶದಿಂದ ಲೋಮನಾಳಕ್ಕೂ ಕೈ ಬದಲಾವಣೆಯಾಗುತ್ತದೆ. ಶುದ್ಧ ರಕ್ತನಾಳಗಳು ಶುದ್ಧ ರಕ್ತವನ್ನು ಹೃದಯದಿಂದ ಆಯಾ ಅಂಗದ ಲೋಮನಾಳದ ವ್ಯೂಹಕ್ಕೆ ತರುತ್ತದೆ. ಅದೇ ರೀತಿ ಅಶುದ್ಧ ರಕ್ತನಾಳವು ಅಶುದ್ಧರಕ್ತವನ್ನು ಆಯಾ ಅಂಗದಿಂದ ಹೃದಯಕ್ಕೆ ಒಯ್ಯುತ್ತದೆ. ಹೃದಯವು ಅಶುದ್ಧ ರಕ್ತವನ್ನು ಶ್ವಾಸಕೋಶಕ್ಕೂ, ಅಲ್ಲಿಂದ ಶುದ್ಧವಾಗಿ ಬಂದ ರಕ್ತವನ್ನು ದೇಹದ ಎಲ್ಲ ಅಂಗಗಳಿಗೂ ಪಂಪ್ ಮಾಡುತ್ತದೆ. ಹೃದಯದಿಂದ ಪಂಪು ಮಾಡಲಾದ ರಕ್ತವು ರಕ್ತನಾಳದಲ್ಲಿ ಪ್ರವಹಿಸುವ ಪ್ರೆಶರನ್ನು ರಕ್ತದೊತ್ತಡ, ಬ್ಲಡ್‌ಪ್ರೆಶರ್ ಎಂದು ಕರೆಯುತ್ತೇವೆ. ಈ ಪ್ರೆಶರ್ ಎಲ್ಲ ನಾಳಗಳಲ್ಲಿ ಒಂದೇ ರೀತಿ ಇರುವುದಿಲ್ಲ. ಹೃದಯಕ್ಕೆ ಹತ್ತಿರದ ನಾಳ (ಅಯೋರ್ಟ)ಗಳಲ್ಲಿ ಹೆಚ್ಚೂ, ಅಶುದ್ಧ ನಾಳದಲ್ಲಿ ಅತಿ ಕಡಿಮೆಯೂ ಇರುತ್ತದೆ. ಸಾಮಾನ್ಯವಾಗಿ ಎಲ್ಲರಲ್ಲಿ ಈ ಪ್ರೆಶರನ್ನು ಕೈಯ ತೋಳಿನ ಶುದ್ಧ ರಕ್ತನಾಳದಲ್ಲಿ ಅಳೆಯುತ್ತಾರೆ. ಸಾಮಾನ್ಯವಾಗಿ ಇದು 120/80mm of Hg ಯಷ್ಟು ಇರುತ್ತದೆ. 120 ಇದು ಹೃದಯವು ತನ್ನಲ್ಲಿ ತುಂಬಿದ ರಕ್ತವನ್ನು ರಕ್ತನಾಳದೊಳಗೆ ಕಳುಹಿಸಲು ಸಂಕುಚಿಸಿದಾಗ ಅಳತೆಮಾಡಿದ ಪ್ರೆಶರ್ (systolic pressure). ಹಾಗೆಯೇ 80 ಎಂಬುದು ಹೃದಯವು ತನ್ನಲ್ಲಿ ರಕ್ತವನ್ನು ತುಂಬಿಸಿಕೊಳ್ಳಲು ವಿಕಸಿಸುವಾಗ ಅಳತೆ ಮಾಡಿದ ಪ್ರೆಶರ್ (diastolic pressure).

ಒಬ್ಬ ಮನುಷ್ಯನ ರಕ್ತದೊತ್ತಡವನ್ನು ನಿರ್ಧರಿಸುವ ಅಂಶಗಳೆಂದರೆ: 1) ಹೃದಯವು ರಕ್ತವನ್ನು ನಾಳಗಳಿಗೆ ಪಂಪು ಮಾಡಲು ಸಂಕುಚಿಸುವಾಗ ಹೃದಯದೊಳಗಿರುವ ರಕ್ತದ ಪ್ರಮಾಣ 2)ಹೃದಯವು ರಕ್ತವನ್ನು ಪಂಪುಮಾಡಲು ಬಳಸುವ ಶಕ್ತಿ 3) ರಕ್ತ ನಾಳಗಳಲ್ಲಿ ಈ ಪ್ರೆಶರನ್ನು ರಕ್ತವು ಎಲ್ಲ ಅಂಗಗಳಿಗೂ ಹರಿದು ಹೋಗುವಷ್ಟರ ಮಟ್ಟಿಗೆ ಕಾಪಾಡಿಕೊಳ್ಳುವ ವ್ಯವಸ್ಥೆ (ಈ ವ್ಯವಸ್ಥೆಯು ರಕ್ತವು ಹರಿದುಹೋಗುವ ನಾಳಗಳ ವ್ಯಾಸವನ್ನು ಅವಲಂಬಿಸಿದೆ).

ದೇಹದಲ್ಲಿ ನೀರಿನ ಮತ್ತು ಲವಣದ ಅಂಶ ಕಡಿಮೆ ಇದ್ದರೆ (ಉದಾ: ಉಪವಾಸವಿದ್ದಾಗ, ವಾಂತಿ ಬೇಧಿ ಜ್ವರದಂತಹಾ ಖಾಯಿಲೆ ಇದ್ದಾಗ), ಹೃದಯಕ್ಕೆ ಅಂಗಗಳಿಂದ ಸಾಕಷ್ಟು ರಕ್ತ ಹರಿದು ಬರದಿದ್ದರೆ (ಉದಾ: ತುಂಬಾ ಹೊತ್ತು ನಿಂತುಕೊಂಡಿದ್ದಾಗ ದೇಹದ ಕೆಳಭಾಗದ ರಕ್ತವು ಹೃದಯಕ್ಕೆ ಬರುವುದು ಕಡಿಮೆಯಾಗುತ್ತದೆ), ಗಾಯದ ಮುಖಾಂತರ ರಕ್ತಸ್ರಾವವಾಗಿ ದೇಹದಿಂದ ರಕ್ತ ನಷ್ಟವಾದಾಗ ಇಂತಹಾ ಸಂದರ್ಭಗಳಲ್ಲಿ ಹೃದಯವು ಸಂಕುಚಿಸುವಾಗ ಅದರಲ್ಲಿರಬೇಕಾದ ರಕ್ತದ ಪ್ರಮಾಣ ಕಡಿಮೆಯಿದ್ದು ರಕ್ತದೊತ್ತಡ ಕಡಿಮೆಯಾಗುತ್ತದೆ.

ಒಂದು ವೇಳೆ ಹೃದಯದ ಮಾಂಸಖಂಡಗಳಿಗೆ ರಕ್ತಪರಿಚಲನೆ ಸರಿಯಿರದಿದ್ದರೆ, ಹೃದಯ ಬಡಿತದ ಗತಿಯಲ್ಲಿ ಏರುಪೇರುಗಳಿದ್ದರೆ, ಹೃದಯದ ಅಂಗರಚನೆಯಲ್ಲೇ ದೋಷ (ಹೃದಯ ಗೋಡೆಯಲ್ಲಿ ತೂತು, ಅದರ ವ್ಯಾಲ್ವ್‌ಗಳು ಸರಿಯಾಗಿ ಕಾರ್ಯನಿರ್ವಹಿಸದಿರುವುದು)ಗಳಿದ್ದರೆ ಹೃದಯವು ನಿಜವಾಗಿ ಸಂಕುಚಿಸಬೇಕಾದಷ್ಟು ಶಕ್ತಿಯಲ್ಲಿ ಸಂಕುಚಿಸುವುದಿಲ್ಲ. ಆಗ ರಕ್ತದೊತ್ತಡ ಕಡಿಮೆ ಇರುತ್ತದೆ.

ಅದೇ ರೀತಿ ರಕ್ತದೊತ್ತಡವು ರಕ್ತನಾಳದ ವ್ಯಾಸವನ್ನವಲಂಬಿಸಿದೆ. ಈ ವ್ಯಾಸವು ಹೃದಯಕ್ಕೆ ಸಮೀಪದ ನಾಳ (ಅಯೋರ್ಟ)ದಲ್ಲಿ ಅತಿ ಹೆಚ್ಚು ಇದ್ದು ನಂತರ ನಿಧಾನವಾಗಿ ಮುಂದೆ ಸಾಗಿದಂತೆ ಕಡಿಮೆಯಾಗುತ್ತಾ ಬರುತ್ತದೆ. ರಕ್ತನಾಳದ ವ್ಯಾಸವು ಎಷ್ಟಿರಬೇಕೆಂದರೆ ಹೃದಯದಿಂದ ಅಯೋರ್ಟಕ್ಕೆ ಪ್ರವೇಶಿಸಿದ ರಕ್ತವು ದೇಹದ ಪ್ರತೀ ಮೂಲೆಯನ್ನು ಸರಾಗವಾಗಿ ಹರಿದುಕೊಂಡು ತಲುಪುವಂತಿರಬೇಕು. ಒಂದುವೇಳೆ ಈ ವ್ಯಾಸದಲ್ಲಿ ಹೆಚ್ಚು ಕಡಿಮೆಯಾದರೆ (ಕೆಲವು ಔಷಧಿಗಳು, ಮೀಣಿ ಜೀವಿಗಳು ಉತ್ಪಾದಿಸುವ ಟಾಕ್ಸಿನ್ (toxin)ಗಳೆಂಬ ಪದಾರ್ಥಗಳ ಪ್ರಭಾವದಿಂದ, ರಕ್ತನಾಳಗಳ ಅಂಗರಚನೆಯಲ್ಲಿನ ದೋಷಗಳು) ರಕ್ತದೊತ್ತಡ ಕಡಿಮೆಯಾಗುತ್ತದೆ.

ತಲೆಸುತ್ತುವುದು (ಮೆದುಳಿಗೆ ಸಾಕಷ್ಟು ರಕ್ತ ತಲುಪದಿರುವ ಪರಿಣಾಮವಾಗಿ) ಕೈಕಾಲುಗಳು ನಡುಗುವುದು, ಕಣ್ಣು ಮಂಜಾದಂತೆ ಕಾಣುವುದು ಇವೆಲ್ಲಾ ರಕ್ತದೊತ್ತಡ ಕಡಿಮೆ ಇರುವ ಸೂಚನೆಗಳು. ತುಂಬಾ ಕಡಿಮೆಯಾದರೆ ರೋಗಿಯು ನಿಲ್ಲಲು, ಕುಳಿತುಕೊಳ್ಳಲು ಅಸಾಧ್ಯವಾಗಿ ಬೀಳುವನು, ಅಪಸ್ಮಾರ ಬರಬಹುದು, ಹೃತ್ಕ್ರಿಯೆ ನಿಲ್ಲಬಹುದು (ಹೃದಯಕ್ಕೂ ರಕ್ತಪರಿಚಲನೆ ನಿಲ್ಲುವಷ್ಟು ಪ್ರೆಶರ್ ಕಮ್ಮಿಯಾದ ಸಂದರ್ಭದಲ್ಲಿ)

ರಕ್ತದೊತ್ತಡ ಕಡಿಮೆಯಾದ ಚಿಹ್ನೆಗಳು ಕಂಡುಬಂದ ಸಂದರ್ಭದಲ್ಲಿ ಕೂಡಲೇ ಅಡ್ಡಲಾಗಿ ಮಲಗಿ ಕಾಲನ್ನು ಎತ್ತರಿಸಿದರೆ ದೇಹದ ಕೆಳಭಾಗದ ರಕ್ತವು ಹೃದಯಕ್ಕೆ ಹರಿದುಬಂದು ಹೃದಯಕ್ಕೆ ಪಂಪು ಮಾಡಲು ಸಾಕಷ್ಟು ರಕ್ತವು ಸಿಗುತ್ತದೆ. ಅಲ್ಲದೇ ಮೆದುಳಿಗೆ ರಕ್ತ ಹರಿಯಲೂ ಅನುಕೂಲವಾಗುತ್ತದೆ. ಸಾಕಷ್ಟು ನೀರನ್ನು ಕುಡಿಯಲು ಕೊಡಬೇಕು (ರೋಗಿಯು ಪ್ರಜ್ಞಾಹೀನನಾಗಿದ್ದರೆ ಬೇಡ). ಮೈಮೇಲಿನ ಬಟ್ಟೆಗಳನ್ನು ಸಡಿಲ ಮಾಡಿ ಸುತ್ತಲೂ ಗುಂಪುಗೂಡಿರಬಹುದಾದ ಜನರನ್ನು ದೂರಮಾಡಿ ಉಸಿರಾಡಲು ಸಾಕಷ್ಟು ಗಾಳಿ ಸಿಗುವಂತೆ ಮಾಡಬೇಕು. ಈ ಪ್ರಥಮ ಚಿಕಿತ್ಸೆಯಿಂದ ಹೆಚ್ಚಿನ ರೋಗಿಗಳ ಹುಷಾರಾಗುತ್ತಾರೆ.

ಪದೇ ಪದೇ ರಕ್ತದೊತ್ತಡ ಕಡಿಮೆಯಾಗುವ ತೊಂದರೆಯಿಂದ ಬಳಲುವವರು ನಿಜವಾದ ಕಾರಣವನ್ನು ವಿವರವಾದ ವೈದ್ಯಕೀಯ ಪರೀಕ್ಷೆಯ ಮೂಲಕ ಪತ್ತೆ ಹಚ್ಚಿಸಿಕೊಂಡು ಸೂಕ್ತ ಚಿಕಿತ್ಸೆ ಪಡೆಯಬಹುದು.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ.: 98451 36322**

## ಪತಂಜಲಿ ಯೋಗ ಪೀಠ, ಹರಿದ್ವಾರ
## ಪತಂಜಲಿ ಯೋಗ ಸಮಿತಿ ಮತ್ತು ಭಾರತ್ ಸ್ವಾಭಿಮಾನ್ ಟ್ರಸ್ಟ್, ಉಡುಪಿ ಜಿಲ್ಲೆ
## ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ.

ಇವರ ಸಹಭಾಗಿತ್ವದಲ್ಲಿ
ಬಾಬಾ ಶ್ರೀರಾಮದೇವಜಿ ಮಹಾರಾಜ ಇವರಿಂದ ತರಬೇತಿಗೊಂಡ ನುರಿತ ಶಿಕ್ಷಕರಿಂದ

# ಉಚಿತ ಪ್ರಾಣ ಯೋಗ ಶಿಬಿರ

**ದಿನಾಂಕ : 17-01-2011ರಿಂದ 23-01-2011**
**ಸಮಯ : ಬೆಳಿಗ್ಗೆ ಗಂಟೆ 5-30ರಿಂದ 7-00ರ ವರೆಗೆ**
**ಸ್ಥಳ : ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ.**

ಪ್ರಾಣಾಯಾಮದಿಂದ ಮನಸ್ಸಿನ ನಿಗ್ರಹ ಸಾಧ್ಯವಾಗುವುದರಿಂದ ಧ್ಯಾನ ಹಾಗೂ ಸಮಾಧಿಗಳ ಸಿದ್ಧಿಯು ಸಹಜವಾಗಿ ಆಗುತ್ತದೆ. ಯೋಗವು ಒಂದು ಪೂರ್ಣ ವಿಜ್ಞಾನ, ಒಂದು ಪೂರ್ಣ ಜೀವನ ಶೈಲಿ, ಒಂದು ಪೂರ್ಣ ಚಿಕಿತ್ಸಾ ಪದ್ಧತಿ, ಒಂದು ಆಧ್ಯಾತ್ಮ ವಿದ್ಯೆಯಾಗಿದೆ. ಆಧುನಿಕ ಮಾನವ ಸಮಾಜವು ಒತ್ತಡ, ಅಶಾಂತ ಹಾಗೂ ಅಜ್ಞಾನದ ಬಲೆಗೆ ಬಿದ್ದಿದೆಯೋ ಅದಕ್ಕೆ ಪರಿಹಾರವನ್ನು ಕೇವಲ ಯೋಗ ನೀಡಬಲ್ಲದು. ಈ ಶಿಬಿರದ ಸದುಪಯೋಗವನ್ನು ಸಾರ್ವಜನಿಕರು ಪಡೆದುಕೊಳ್ಳಬೇಕಾಗಿ ವಿನಯಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುವ,

**-ಅಧ್ಯಕ್ಷರು ಮತ್ತು ಸದಸ್ಯರು**

ಸಕ್ಕರೆ ಕಾಯಿಲೆ, ರಕ್ತದ ಒತ್ತಡ, ಹೃದಯ ಸಂಬಂಧಿ ತೊಂದರೆ, ಕಿಡ್ನಿಯ ತೊಂದರೆ, ಅಸ್ತಮ ಹಾಗೂ ಇತರೇ ಶ್ವಾಸಕೋಶ ಸಂಬಂಧಿ ತೊಂದರೆಗಳಿಗೆ ಹಾಗೂ ಮಾನಸಿಕ ಕಾಯಿಲೆಗಳಿಗೆ ಪ್ರಾಣಾಯಾಮದ ಅಭ್ಯಾಸದಿಂದ ಸಂಪೂರ್ಣ ಮುಕ್ತಿ ದೊರೆಯುತ್ತದೆ.

ವಿ.ಸೂ. : ಶಿಬಿರಾರ್ಥಿಗಳು ಬರುವಾಗ ಬೆಡ್‌ಶೀಟ್ ಮತ್ತು ಕರವಸ್ತ್ರ ತರಬೇಕು ಮತ್ತು ಖಾಲಿ ಹೊಟ್ಟೆಯಲ್ಲಿ ಬರಬೇಕು.

**ಸಮಾಜಬಾಂಧವರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ**

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು, ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಬುಧವಾರ : ''ಸೌಂದರ್ಯಲಹರಿ ಪಾರಾಯಣ'' ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''ಪಾರಾಯಣ'' ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.22-01-2011) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

2ನೇ ಶನಿವಾರ : **ತಾ.12-02-2011 ''ಗಮಕವಾಚನ'' ಸಂಜೆ ಗಂಟೆ 5-00ರಿಂದ (ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾವ್ ಹಾಗೂ ಶ್ರೀ ಬಾರ್ಕೂರು ನಾಗೇಶ ರಾವ್‌ರವರಿಂದ)**

**ತಾ.08-02-2010 ಮಾಘ ಮಾಸ ಶುದ್ಧ ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.31-01-2011ರ ಮೂಲಾನಕ್ಷತ್ರ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ ಗಂಟೆ 5-00ರಿಂದ 6-00ರ ವರೆಗೆ) ಸದ್ಭಕ್ತರು ಸಹಕರಿಸಬೇಕಾಗಿ ವಿನಂತಿ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಶಿಕ್ಷಣ, ತರಬೇತಿ ಮತ್ತು ವಿದ್ಯಾರ್ಥಿ ವೇತನ ವೇದಿಕೆ

**ಶ್ರೀಶಾರದಾ ಮಂಟಪ, ಉಡುಪಿ-2**

**ಎಸ್.ಎಸ್.ಎಲ್.ಸಿ. (ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ)**
**ವಿದ್ಯಾರ್ಥಿಗಳಿಗೆ ಪರೀಕ್ಷಾ ತರಬೇತಿ ಶಿಬಿರ**

**ದಿನಾಂಕ 30-01-2011 (ರವಿವಾರ) ಸ್ಥಳ : ಶಾರದಾ ಮಂಟಪ, ಉಡುಪಿ.**
**ಸಮಯ : ಬೆಳಿಗ್ಗೆ 9-30ರಿಂದ ಸಂಜೆ 4-30ರ ವರೆಗೆ**

ಶಿಬಿರದಲ್ಲಿ ಹಿಂದಿನ ಪಬ್ಲಿಕ್ ಪರೀಕ್ಷೆ ಮತ್ತು ಇತ್ತೀಚಿನ ಪೂರ್ವಸಿದ್ಧತಾ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ವಿತರಣೆ ಮತ್ತು ಚರ್ಚೆ, ಗಣಿತ ಮತ್ತು ವಿಜ್ಞಾನ ವಿಷಯಗಳ ಬಗ್ಗೆ ವಿವರವಾಗಿ ಹಾಗೂ ಇತರ ಎಲ್ಲಾ ವಿಷಯಗಳ ಕುರಿತು ಸಂಕ್ಷಿಪ್ತವಾಗಿ ಅನುಭವಿ ಶಿಕ್ಷಕರಿಂದ ಮಾಹಿತಿಗಳನ್ನು ನೀಡಲಾಗುವುದು.

ವಿ.ಸೂ. :
1) ವಿದ್ಯಾರ್ಥಿಗಳು ಪಠ್ಯಪುಸ್ತಕಗಳು ಮತ್ತು ಬರವಣಿಗೆ ಸಾಮಗ್ರಿಗಳೊಂದಿಗೆ ಹಾಜರಿರಬೇಕು.
2) ಶಿಬಿರಕ್ಕೆ ಯಾವುದೇ ಶುಲ್ಕ ಇರುವುದಿಲ್ಲ.
3) ಶಿಬಿರದಲ್ಲಿ ಊಟ, ಉಪಾಹಾರಗಳ ವ್ಯವಸ್ಥೆ ಇರುತ್ತದೆ.
4) ಆಸಕ್ತ ವಿದ್ಯಾರ್ಥಿಗಳು ವೇದಿಕೆಯ ಸಂಚಾಲಕರಾದ ಶ್ರೀ ಪ್ರಭಾಕರ ಭಂಡಿ (ಫೋನ್ : 9449254846) ಅಥವಾ ಅಧ್ಯಕ್ಷರಾದ ಡಾ। ವೈ. ರವೀಂದ್ರನಾಥ ರಾವ್ (ಫೋನ್ : 9972985744) ಇವರಲ್ಲಿ ನೋಂದಾಯಿಸಬೇಕಾಗಿ ವಿನಂತಿ.

ನಮ್ಮ ಸಮಾಜದ ವಿದ್ಯಾರ್ಥಿಗಳು ಈ ಶಿಬಿರದ ಸಂಪೂರ್ಣ ಪ್ರಯೋಜನವನ್ನು ಪಡೆಯಲು ಕೋರಲಾಗಿದೆ.

**- ಅಧ್ಯಕ್ಷರು ಮತ್ತು ಸದಸ್ಯರು, ಶಿಕ್ಷಣ, ತರಬೇತಿ ಮತ್ತು ವಿದ್ಯಾರ್ಥಿವೇತನ ವೇದಿಕೆ.**

## ವಧೂ-ವರರ ವೇದಿಕೆ

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.**

ಸಮಾಜದ ವಿವಾಹ ಯೋಗ್ಯ ವಧೂ-ವರರ ನೋಂದಣಿ, ವಿವಿಧ ಮಾಹಿತಿ ಮೊದಲಾದವುಗಳನ್ನು ಆಸಕ್ತ ಹೆತ್ತವರು ಪಡೆದುಕೊಂಡು ಪರಸ್ಪರ ವಿಚಾರ ವಿನಿಮಯ ಮಾಡಲು ಅವಕಾಶವಿದೆ. ಸಮಾಜ ಬಾಂಧವರು ವೇದಿಕೆಯ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ.

**- ಅಧ್ಯಕ್ಷರು, ವಧೂವರರ ವೇದಿಕೆ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ-2**





**RAJESH POWER PRESS**
PRINTERS & PUBLISHERS
DARBE, PUTTUR, DA. KA. -574 202.
KARNATAKA STATE, SOUTH INDIA.
Ph :(08251) 231696, 231697 & 322386
E-mail :msraghunathrao@hotmail.com
**QUALITY FIRST AND ALWAYS**



**Buying and selling shares as easy as checking your emails**

**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)



**ಎಮ್. ದೇವಾನಂದ್ ಭಟ್**
Cell :9845644556

**ಶೋಭಾ ಡಿಜಿಟಲ್**
ಸ್ಟುಡಿಯೋ & ವೀಡಿಯೊ

ಉತ್ತಮ ಗುಣಮಟ್ಟದ ಫೋಟೋಗ್ರಾಫಿಗಾಗಿ ಸಂಪರ್ಕಿಸಿರಿ




**ಬೆಳ್ವಾಯಿ-574213**
(08258)-276177 (O), (918258)-324133 (O), 276777 (R)
**ಎಡಪದವು - 574 164** (0824)-256374 (O) ಮಂಗಳೂರು, ದ.ಕ.




# ರಾಮಾ ಅಟೋಮೊಬೈಲ್ಸ್

**ಮಾರುತಿ ವಾಹನ ತಜ್ಞರು**

ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.
**ಫೋನ್ : 2454355, ಮೊಬೈಲ್ : 94485 45702**



ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ




Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org